# THE GENERAL EPISTLE OF JAMES.

## ಯಾಕೋಬನ ಹುದುವಾದ ಪತ್ರಿಕೆಯನ್ನು ಕುರಿತ ಪೀಠಿಕೆ.

ಯೋಹಾನನ ಸಹೋದರನಾದ ಯಾಕೋಬನು ಸತ್ತ ತರುವಾಯ (ಅಪೊ. ಕ್ರಿ. ೧೨. ೨.) ಯೆರೂಸಲೇಮ್ ಪಟ್ಟಣದ ಸಭೆಗೆ ಶ್ರೇಷ್ಠನಾಗಿದ್ದ ಯಾಕೋಬನು (ಅಪೊ. ಕ್ರಿ. ೧೨. ೧೭; ೧೫. ೧೩—೨೯; ೨೧. ೧೮—೨೫.) ಈ ಪತ್ರಿಕೆಯನ್ನು ಬರೆದನೆಂಬುವದೇ ತಿರುಸಭೆಯ ಸಾಧಾರಣ ಅಭಿಪ್ರಾಯವು. ಅವನು ಕರ್ತನ ಸಹೋದರನೆಂದು ಅಪೊಸ್ತಲನಾದ ಪೌಲನು ಹೇಳುತ್ತಾನೆ. (ಗಲಾ. ೧. ೧೯. ಮತ್ತಾ. ೧೩. ೫೫. ವಚನಗಳ ವ್ಯಾಖ್ಯಾನ ನೋಡ ಬೇಕು.) ಅವನು ಅಲ್ಫಾಯನ ಕುಮಾರನಾಗಿಯೂ ಹನ್ನೆರಡು ಮಂದಿ ಅಪೊಸ್ತಲರಲ್ಲಿ ಒಬ್ಬನಾಗಿಯೂ ಇದ್ದ ಯಾಕೋಬನೆಂದು ಕೆಲವರು ನೆನಸುತ್ತಾರೆ. (ಮತ್ತಾ. ೧೦. ೩.) ಆದರೆ ಅದು ಸರಿಯಲ್ಲ. ಹನ್ನೆರಡು ಮಂದಿ ಅಪೊಸ್ತಲರು ನೇಮಿಸಲ್ಪಟ್ಟ ಕೆಲವು ಕಾಲದ ತರುವಾಯ ಬರುವ ಚರಿತ್ರೆಯಿಂದ ಕರ್ತನಿಗೆ ಸಹೋದರರಾಗಿದ್ದವರು ಆತನನ್ನು ನಂಬದೆ ಇದ್ದರೆಂದು ಹೇಳಿರುತ್ತದೆ. ಆದಾಗ್ಯೂ ಅವರು ಆತನ ಪ್ರಾಯಶ್ಚಿತ್ತಮರಣವನ್ನೂ ಪುನರುತ್ಥಾನವನ್ನೂ ಕಂಡು, ಆತನ ಸತ್ಯೋಪದೇಶವನ್ನು ಗ್ರಹಿಸಿ, ಆತನು ಪರಲೋಕಕ್ಕೆ ಏರಿ ಹೋದ ಕಾಲದಲ್ಲಿ ಆತನ ಶರಣಾಗತರಾದರೆಂದು ನೆನಸ ತಕ್ಕದ್ದು. (ಅಪೊ. ಕ್ರಿ. ೧. ೧೪.)

ಲೋಕದಲ್ಲೆಲ್ಲಿಯೂ ಹೋಗಿ ಸರ್ವಸೃಷ್ಟಿಗೂ ಸುವಾರ್ತೆಯನ್ನು ಪ್ರಸಂಗಿಸ ಬೇಕೆಂದು ಅಪ್ಪಣೆಯನ್ನು ಹೊಂದಿದ ಹನ್ನೆರಡು ಮಂದಿ ಅಪೊಸ್ತಲರು (ಮತ್ತಾ. ೨೮. ೧೯.) ಒಂದೇ ಸ್ಥಳದಲ್ಲಿದ್ದು ಕೊಂಡು ಒಂದು ಸಭೆಯನ್ನು ವಿಚಾರಿಸುವದು ತಕ್ಕದ್ದಲ್ಲ. ಯೆಹೂದ್ಯರ ಪರಿಶುದ್ಧ ಪಟ್ಟಣವಾದ ಯೆರೂಸಲೇಮಿನ ಸಭೆಯಲ್ಲಿ ಎಲ್ಲರೂ ಘನವಾಗಿ ಎಣಿಸ ತಕ್ಕ ಪ್ರಕಾರ ದೇವಸೇವೆಯನ್ನು ನಡಿಸ ತಕ್ಕವನು ಯೇಸು ರಕ್ಷಕನ ಸಹೋದರನಾಗಿಯೂ ಸತ್ಪುರುಷನಾಗಿಯೂ ಇದ್ದ ಯಾಕೋಬನೇ ತಕ್ಕವನಾಗಿದ್ದನು.

ಯಾಕೋಬನು ನ್ಯಾಯಪ್ರಮಾಣವನ್ನು ಬಹು ಕ್ರಮವಾಗಿ ಅನುಸರಿಸಿದವನೆಂದು ಈ ಪತ್ರಿಕೆಯಿಂದಲೂ, ಬೇರೆ ಗ್ರಂಥಗಳಲ್ಲಿ ಅವನನ್ನು ಕುರಿತು ಹೇಳಿರುವ ವರ್ತಮಾನಗಳಿಂದಲೂ ತಿಳಿಯ ಬರುತ್ತದೆ. (ಅಪೊ. ಕ್ರಿ. ೨೧. ೧೮. ಗಲಾ. ೨. ೧೨.) ಅವನು ಪರಿಶುದ್ಧನಾಗಿಯೂ ಗುಣಶೀಲನಾಗಿಯೂ ತೋರಿದ ಕಾರಣ, ಅವನು ತನ್ನ ದೇಶಸ್ಥರಾದ ಸಕಲರಿಂದಲೂ ನೀತಿವಂತನೆಂಬ ಶ್ರೇಷ್ಠ ಹೆಸರನ್ನು ಹೊಂದಿದವನಾಗಿದ್ದನು. ಆದದರಿಂದ ದೇವರ ಕೃಪೆ ಹೊಂದಿದ ಅವನು ತನ್ನ ದೇಶಸ್ಥರಿಗೆ ತಾನು ತಿಳುಕೊಂಡ ಸತ್ಯವನ್ನು ಹೇಳುತ್ತಾನೆ.

ಯಾಕೋಬನು ಕ್ರಿಸ್ತನ ಮಾರ್ಗವನ್ನು ಅನುಸರಿಸಿದ್ದ ಇಬ್ರೀಯರಿಗೆ ಈ ಪತ್ರಿಕೆಯನ್ನು ಬರೆದನೆಂದು ಇದರ ಮೇಲ್ವಿಳಾಸದಿಂದಲೂ, (೧. ೧.) ಅರ್ಥಸಂಗ್ರಹದಿಂದಲೂ ತೋರುತ್ತದೆ. ಅವರು ಪಂಚಾಶತ್ತಿನ ದಿವಸದಲ್ಲಿ ಗುಣ ಪಟ್ಟವರಾಗಿಯೂ, (ಅಪೊ. ಕ್ರಿ. ೨. ೫—೧೧.) ರೋಮರಾಜ್ಯದಲ್ಲಿರುವ ನಾನಾ ಸ್ಥಳಗಳಲ್ಲಿ ವಾಸ ಮಾಡುವವರಾಗಿಯೂ, ಸತ್ಯಮಾರ್ಗವನ್ನು ಆಯಾ ಸ್ಥಳಗಳಲ್ಲಿ ಪ್ರಸಿದ್ಧಿ ಮಾಡಿದವರಾಗಿಯೂ ಇದ್ದರು. ಅವರು ಯೆಹೂದ್ಯರ ಮುಖ್ಯ ಹಬ್ಬಗಳಿಗೆ ಯೆರೂಸಲೇಮಿಗೆ ಹೋಗಿ ಬರುವವರಾಗಿದ್ದದರಿಂದ, ಯಾಕೋಬನು ಅವರನ್ನು ಅರಿತಿದ್ದನು. ಅವರು ಶರೀರದ ಪ್ರಕಾರ ಉಪದ್ರ ಪಡುವವರಾಗಿಯೂ, ಆತ್ಮದ ಪ್ರಕಾರ ಬಲಹೀನರಾಗಿಯೂ ಇದ್ದರೆಂದು ಈ ಪತ್ರಿಕೆಯಿಂದ ತಿಳಿಯುತ್ತದೆ. ದೇವರ ಚಿತ್ತಕ್ಕೆ ಒಳಪಟ್ಟು ನಡಿಯುವದೂ, ಉಪದ್ರವನ್ನು ತಾಳ್ಮೆಯಾಗಿ ಸಹಿಸುವದೂ, ಎಲ್ಲರಿಗೂ ಅನುಕೂಲವಾಗಿರುವದೂ, ಒಬ್ಬರನ್ನೊಬ್ಬರು ಪ್ರೀತಿ ಮಾಡುವದೂ, ಮುಂತಾದ ಈ ಸದ್ಗುಣಗಳು ಅವರಲ್ಲಿ ಬಹಳ ಕೊರತೆಯಾಗಿದ್ದವು.

ಈ ಪತ್ರಿಕೆ ಬರಿಯಲ್ಪಟ್ಟ ಕಾಲವನ್ನು ದಿಟ್ಟವಾಗಿ ಹೇಳುವದು ಕಷ್ಟವಾಗಿದೆ. ಯಾಕೋಬನು ರಕ್ತಸಾಕ್ಷಿಯಾಗಿ ಸತ್ತ ೬೨ನೇ ವರುಷಕ್ಕೆ ಸ್ವಲ್ಪ ಕಾಲಕ್ಕೆ ಮುಂಚೆ ಬರೆಯಲ್ಪಟ್ಟಿರುವದೆಂದು ಅನೇಕರು ನೆನಸುತ್ತಾರೆ.

---

# THE GENERAL EPISTLE OF JAMES.

## ಯಾಕೋಬನ ಹುದುವಾದ ಪತ್ರಿಕೆ.

ಶೋಧನೆಯ ಗುರಿಯು; ಅದನ್ನು ದೃಢ ಮನಸ್ಸಿನಿಂದ ಸಹಿಸುವದು; ದೇವಭಕ್ತಿಯ ಬಲವು.

1\. [1]ದೇವರಿಗೂ, ಕರ್ತನಾದ ಯೇಸು ಕ್ರಿಸ್ತನಿಗೂ ದಾಸನಾದ ಯಾಕೋಬನು, [2]ಚದರಿರುವ ಹನ್ನೆರಡು
ಕುಲಗಳಿಗೆ ಶುಭವಾಗಲಿ.
೨ ನನ್ನ ಸಹೋದರರೇ, ನಿಮ್ಮ ವಿಶ್ವಾಸದ ಪರೀಕ್ಷೆಯು [3]ತಾಳ್ಮೆಯನ್ನು ಉಂಟು ಮಾಡುತ್ತದೆಂದು ತಿಳಿದು,
೩, ೪ ನಾನಾ [4]ಶೋಧನೆಗಳಲ್ಲಿ ಬಿದ್ದರೆ, ಪೂರ್ಣ ಸಂತೋಷವೆಂದೆಣಿಸಿರಿ. ಆದರೆ ನೀವು ಸ್ಥಿರವಾದವರೂ
[5]ಸಂಪೂರ್ಣರೂ ಯಾವದರಲ್ಲಿಯೂ ಕಡಿಮೆ ಇಲ್ಲದವರೂ ಆಗಿರುವ ಹಾಗೆ, ತಾಳ್ಮೆಗೆ ಸಂಪೂರ್ಣ ಕೆಲ
ಸವಿರಲಿ.
೫ ಆದರೆ ನಿಮ್ಮಲ್ಲಿ ಯಾವನಿಗಾದರೂ [6]ಜ್ಞಾನ ಕಡಿಮೆಯಾಗಿದ್ದರೆ, ಹಂಗಿಸದೆ ಎಲ್ಲರಿಗೂ [7]ಉಚಿತವಾಗಿ
೬ ಕೊಡುವ ದೇವರ ಹತ್ತರ ಬೇಡಿ ಕೊಳ್ಳಲಿ; ಆಗ ಅವನಿಗೆ ಕೊಡಲ್ಪಡುವದು. ಆದರೆ ಏನೂ ಸಂದೇಹ
ಪಡದೆ, [8]ವಿಶ್ವಾಸವಾಗಿ ಬೇಡಿ ಕೊಳ್ಳಲಿ; ಯಾಕಂದರೆ ಸಂದೇಹ ಪಡುವವನು ಘಾಳಿಯಿಂದ ಬಡಿಯಲ್ಪಟ್ಟ

---

1\. ಈ ಪತ್ರಿಕೆಯನ್ನು ಬರೆದ ಗ್ರಂಥಕರ್ತನಾದ ಯಾಕೋಬನು ಹನ್ನೆರಡು ಕುಲಗಳವರನ್ನು ಹರಸಿದ ತರುವಾಯ (೧. ೧.) ತಾಳ್ಮೆಗೆ ಅನುಕೂಲವಾಗಿರುವ ಉಪದ್ರವನ್ನು ಸಂತೋಷದಿಂದ ಸಹಿಸ ಬೇಕೆಂದೂ, (೨—೪. ವ.) ಜ್ಞಾನಕ್ಕಾಗಿ ದೃಢವಾಗಿ ಪ್ರಾರ್ಥಿಸ ಬೇಕೆಂದೂ, (೫—೮. ವ.) ಮೇಲನ್ನು ಬರ ಮಾಡ ತಕ್ಕ ತಾಳ್ಮೆಯಾದ ದೀನ ಸ್ಥಿತಿಯಲ್ಲಿ ಸಂತೋಷವಾಗಿರ ಬೇಕೆಂದೂ, (೯—೧೨. ವ.) ಹೇಳಿ, ಎಲ್ಲಾ ಒಳ್ಳೇ ದಾನಗಳ ಮೂಲಬುಗ್ಗೆಯಾಗಿರುವ ದೇವರು ಪಾಪಕ್ಕೆ ಕಾರಣನೆಂಬುವ ತಪ್ಪಾಲೋಚನೆಯಿಂದ ಪಾಪ ಮಾಡ ಕೂಡದೆಂದೂ, (೧೩—೧೮. ವ.) ದೇವರ ಸದ್ಗುಣಗಳನ್ನು ಅರಿಯದವರ ಹಾಗೆ ಕೋಪ ತಾಪಗಳಿಗೆ ಸ್ಥಳ ಕೊಡ ಬಾರದೆಂದೂ, (೧೯—೨೧. ವ.) ದೇವರ ವಾಕ್ಯಕ್ಕೆ ವಿಧೇಯರಾಗದೆ ಅದನ್ನು ಕೇಳುವದರಿಂದ ಮಾತ್ರ ಆಶೀರ್ವಾದ ಬರುವದೆಂದು ನೆನಸುವದು ಮೋಸವೆಂದೂ, (೨೨—೨೫. ವ.) ದೇವಭಕ್ತಿ ಇಲ್ಲದೆ ಅದರ ವೇಷವನ್ನು ಧರಿಸಿರುವದು ವ್ಯರ್ಥವೆಂದೂ, (೨೬, ೨೭. ವ.) ಅವರನ್ನು ಎಚ್ಚರಿಸುತ್ತಾನೆ.

2\. (ಯೋಹಾ. ೭. ೩೫. ೧ ಪೇತ್ರ. ೧. ೧.) ಹನ್ನೆರಡು ಕುಲಗಳವರಾದ ಇಸ್ರಯೇಲ್ಯರು ರೋಮರಾಜ್ಯದ ದೇಶಗಳಲ್ಲೆಲ್ಲಾ ಚದರಿ ಇದ್ದರು. ಇವರಲ್ಲಿ ಕ್ರಿಸ್ತನ ಸಭೆಯಲ್ಲಿ ಶೇರಿದಂಥವರಿಗೆ ಯಾಕೋಬನು ಬರೆಯುತ್ತಾನೆ.

3\. ಆ ಕಾಲದಲ್ಲಿ ಅವರ ವಿಶ್ವಾಸವು ಉಪದ್ರವೆಂಬ ಪುಠದಲ್ಲಿ ಶೋಧಿಸಲ್ಪಡುವದರಿಂದ, ಆ ಶೋಧನೆಗೆ ಆಯಾಸ ಪಡದೆ, ಅದು ತಾಳ್ಮೆಯನ್ನೂ ದೃಢವನ್ನೂ ಹುಟ್ಟಿಸುವದರಿಂದ ಸಂತೋಷವಾಗಿ ಸಹಿಸ ಬೇಕೆಂದು ಹೇಳುತ್ತಾನೆ. (ಇಬ್ರೀ. ೧೨. ೧. ವಚನದ ವ್ಯಾಖ್ಯಾನ ನೋಡ ಬೇಕು.)

4\. ನಂಬಿಕೆಯನ್ನೂ ತಾಳ್ಮೆಯನ್ನೂ ಪರೀಕ್ಷಿಸ ತಕ್ಕ ಉಪದ್ರಗಳೆಲ್ಲಾ ಶೋಧನೆಗಳೇ. ಇಂಥಾ ಶೋಧನೆಗಳು ಸಂಭವಿಸುವಾಗ ಭಕ್ತರು ದಣಿದು ಹೋಗದೆ ಸಂತೋಷ ಪಡ ತಕ್ಕದ್ದು.

5\. ಸಂಪೂರ್ಣರೆಂಬುವದು ಮೂಲ ಭಾಷೆಯ ತಾತ್ಪರ್ಯದ ಪ್ರಕಾರ ಸರ್ವ ಕಡೆಯಲ್ಲಿಯೂ ಆರೋಗ್ಯವುಳ್ಳವರೆಂದು ಹೇಳಬಹುದು. (೧ ಥೆಸ್ಸ. ೫. ೨೩.) ಭಕ್ತರು ಮುಕ್ತಿಗೆ ಪಕ್ವವಾಗುವದಕ್ಕೆ ದೇವರು ಕಳುಹಿಸುವ ಉಪದ್ರಗಳನ್ನೆಲ್ಲಾ ಪೂರ್ಣ ತಾಳ್ಮೆಯಿಂದ ಸಹಿಸುವವರು ಸಂಪೂರ್ಣರಾಗಿಯೂ, ಸರ್ವಭಾಗದಲ್ಲಿಯೂ ಆರೋಗ್ಯವುಳ್ಳವರಾಗಿಯೂ ಇರುವರು.

6\. ವಿಶ್ವಾಸವೂ ತಾಳ್ಮೆಯೂ ಪ್ರಕಟವಾಗ ತಕ್ಕ ಶೋಧನೆಯಲ್ಲಿ ಇರುವವರಿಗೆ ಮೇಲಿನಿಂದ ಬರುವ ಜ್ಞಾನವು ಅವಶ್ಯವಾಗಿ ಬೇಕು. (೩. ೧೭.)

7\. ಸರ್ವಸಂಪೂರ್ಣನಾದ ದೇವರು ಉಚಿತವಾಗಿ ಕೊಡುವ ವರಗಳು ಸಂಪೂರ್ಣವಾಗಿರುವವು. ಆತನು ತನ್ನನ್ನು ಬೇಡಿ ಕೊಳ್ಳುವ ಭಕ್ತರನ್ನು ಅವರ ಕೊರತೆಯ ನಿಮಿತ್ತವೂ, ಪೀಡಿಸುವ ನಿಮಿತ್ತವೂ ಅವರನ್ನು ಹಂಗಿಸದೆ ಗದರಿಸದೆ, ಅರಸನಾದ ಸೊಲೊಮೋನನಿಗೆ ಕೊಟ್ಟ ಪ್ರಕಾರ ಅವರು ಬೇಡಿ ಕೊಳ್ಳುವದಕ್ಕಿಂತ ಅಧಿಕವಾಗಿಯೇ ಕೊಡುವನು.

8\. ಸರ್ವಶಕ್ತನೂ ಪ್ರೀತಿಸ್ವರೂಪನೂ ಆಗಿರುವ ದೇವರು, ತನ್ನ ದಾಸರು ಬೇಡಿ ಕೊಳ್ಳುವ ಮೇಲುಗಳನ್ನು ಕೊಡುವನೆಂದು ದೃಢವಾಗಿ ನಂಬುವದು, ಆತನಿಗೆ ಮಹಿಮೆಯನ್ನು ಕೊಡುವದಾಗಿದೆ. ಹಾಗೆ ಮಾಡದೆ ಸಂದೇಹ ಪಡುವವನು (ಮತ್ತಾ. ೨೧. ೨೧.) ಘಾಳಿಯಿಂದ ಬಡಿಯಲ್ಪಡುವ ಸಮುದ್ರದ ತೆರೆಗಳಿಗೆ ಸಮಾನವಾಗಿ ಸ್ಥಿರತ್ವವಿಲ್ಲದೆ ಕದಲುತ್ತಿರುವನು. ಎರಡು ಮನ

೭ ಕದಲುವ ಸಮುದ್ರದ ತೆರೆಗೆ ಸಮಾನನಾಗಿದ್ದಾನೆ. ಆ ಮನುಷ್ಯನು, ಕರ್ತನಿಂದ ಏನಾದರೂ ಹೊಂದು
೮ ವೆನೆಂದು ನೆನಸದಿರಲಿ. ಎರಡು ಮನಸ್ಸುಳ್ಳವನು ತನ್ನ ಸಕಲ ಮಾರ್ಗಗಳಲ್ಲಿ ಚಂಚಲನಾಗಿದ್ದಾನೆ.
೯, ೧೦ ದೀನನಾದ ಸಹೋದರನು ತನ್ನ ದೊಡ್ಡಸ್ತಿಕೆಯಲ್ಲಿಯೂ, ಐಶ್ವರ್ಯವಂತನು ತನ್ನ ದೈನ್ಯದಲ್ಲಿಯೂ
೧೧ [1]ಹೆಚ್ಚಳ ಪಡಲಿ. ಯಾಕಂದರೆ ಹುಲ್ಲಿನ ಹೂವಿನ ಹಾಗೆಯೇ ಕಳೆದು ಹೋಗುವನು. ಹ್ಯಾಗಂದರೆ ಸೂ
ರ್ಯನು ಬಿಸಿಲಿನೊಂದಿಗೆ ಎದ್ದು, ಹುಲ್ಲನ್ನು ಬಾಡಿಸಲಾಗಿ, ಅದರ ಹೂವು ಬಿದ್ದು, ಅದರ ಮುಖದ ಸೌಂದ
ರ್ಯವು ನಾಶವಾಗುವದು. ಹಾಗೆಯೇ ಐಶ್ವರ್ಯವಂತನು ತನ್ನ ಹಾದಿಗಳಲ್ಲಿ ಕುಂದಿ ಹೋಗುವನು.
೧೨ ಶೋಧನೆಯುನ್ನು ತಾಳಿ ಕೊಳ್ಳುವ ಮನುಷ್ಯನು ಭಾಗ್ಯವಂತನು; ಯಾಕಂದರೆ ಅವನು [2]ಪರೀಕ್ಷಿತನಾದ
ಮೇಲೆ, ಕರ್ತನು ತನ್ನನ್ನು ಪ್ರೀತಿ ಮಾಡುವವರಿಗೆ ವಾಗ್ದತ್ತ ಮಾಡಿದಂಥ ಜೀವದ ಕಿರೀಟವನ್ನು ಹೊಂದುವನು.
೧೩ ಯಾವನಾದರೂ, ಶೋಧಿಸಲ್ಪಡುವಾಗ, ದೇವರಿಂದ ಶೋಧಿಸಲ್ಪಡುತ್ತೇನೆಂದು ಹೇಳದಿರಲಿ. ಯಾಕಂದರೆ
೧೪ ದೇವರು ಕೆಟ್ಟದರಿಂದ ಶೋಧಿಸಲ್ಪಡದವನು; ತಾನೂ [3]ಒಬ್ಬನನ್ನೂ ಶೋಧಿಸುವದಿಲ್ಲ. ಆದರೆ ಒಬ್ಬೊಬ್ಬನು
೧೫ ಸ್ವಂತ ಇಚ್ಛೆಯಿಂದ ಎಳೆಯಲ್ಪಟ್ಟು, ಮರುಳುಗೊಂಡು, ಶೋಧಿಸಲ್ಪಡುತ್ತಾನೆ. ಆ ಮೇಲೆ ಇಚ್ಛೆಯು
ಗರ್ಭವನ್ನು ಧರಿಸಿ ಕೊಂಡು, ಪಾಪವನ್ನು ಹೆರುತ್ತದೆ; ಪಾಪವು [4]ಸಂಪೂರ್ಣವಾದ ಮೇಲೆ, ಮರಣವನ್ನು
ಹಡಿಯುತ್ತದೆ.
೧೬, ೧೭ ನನ್ನ ಪ್ರಿಯ ಸಹೋದರರೇ, [5]ಮೋಸ ಹೋಗ ಬೇಡಿರಿ. ಎಲ್ಲಾ ಒಳ್ಳೇ ವರಗಳೂ, ಎಲ್ಲಾ ಸಂ
ಪೂರ್ಣ ದಾನಗಳೂ ಮೇಲಿನಿಂದ ಉಂಟಾಗಿ, ಬೆಳಕುಗಳ ತಂದೆಯಿಂದ ಇಳಿದು ಬರುತ್ತವೆ; ಅವನಲ್ಲಿ ಮಾ
೧೮ ರ್ಪಡುವಿಕೆಯೂ, [6]ತಿರುಗಾಟದ ನೆರಳೂ ಇಲ್ಲ. ಅವನ ಸೃಷ್ಟಿಗಳಲ್ಲಿ ನಾವು ಒಂದು ಪ್ರಥಮ ಫಲವಾಗಿರುವ
ಹಾಗೆ, ಅವನು ಮನಸ್ಸು ಮಾಡಿ, ಸತ್ಯದ ವಾಕ್ಯದಿಂದ ನಮ್ಮನ್ನು ಪಡೆದಿದ್ದಾನೆ.

ಸ್ಸುಳ್ಳ ಅವನು ದೇವರ ಬಲವನ್ನೂ ಪ್ರೀತಿಯನ್ನೂ ಸರಿಯಾಗಿ ನಂಬದೆ ಇರುವದರಿಂದ ಆತನ ಆಶೀರ್ವಾದವನ್ನು ಹೊಂದಲಾರನು. (ಇಬ್ರೀ. ೧೧. ೬.)

1. ಲೋಕದ ಸಂಪತ್ತಿಲ್ಲದೆ ದೀನ ಸ್ಥಿತಿಯಲ್ಲಿರುವ ದೇವಭಕ್ತನು, ತಾನು ದೇವರಿಗೆ ಮಗುವಾಗಿಯೂ ಮೋಕ್ಷಾನಂದಕ್ಕೆ ಸ್ವತಂತ್ರನಾಗಿಯೂ ಎತ್ತಲ್ಪಟ್ಟಿರುವ ಕಾರಣದಿಂದ ಹೆಚ್ಚಳ ಪಡುವದು ನ್ಯಾಯವಾಗಿದೆ. ಐಶ್ವರ್ಯವಂತನ ಬದುಕು ಮಾಯವಾಗುವದರಿಂದಲೂ, ಅವನು ತಾನೇ ಹುಲ್ಲಿನ ಹೂವಿನ ಹಾಗೆ ಕಳೆದು ಹೋಗುವದರಿಂದಲೂ, ಐಶ್ವರ್ಯವಂತನು ಗರ್ವ ಪಡ ಬಾರದು.

2. ಶೋಧನೆಯನ್ನು ತಾಳ್ಮೆಯಿಂದ ಸಹಿಸುವವನೇ ಉತ್ತಮನಾಗಿ ತೋರುವನು. (ಮತ್ತಾ. ೫. ೧೦—೧೨.) ಅವನು ಹೊಂದುವ ಜೀವದ ಕಿರೀಟವು ಹುಲ್ಲಿನ ಹಾಗೆ ಬಾಡಿ ಹೋಗದೆ, ಸದಾಕಾಲ ಮಹಿಮೆಯುಳ್ಳದ್ದಾಗಿರುವದು.

3. ಕೇಡು ಎಂಬುವಂಥಾದ್ದು ಸ್ವಲ್ಪವಾದರೂ ಸಮೀಪಿಸ ಕೂಡದ ಪರಿಶುದ್ಧ ದೇವರ ಬಳಿಯಿಂದ ಕೇಡು ಬರಲಾರದು. ಮನುಷ್ಯರಲ್ಲಿ ವಾಸವಾಗಿರುವ ಇಚ್ಛೆಯಿಂದ ಪಾಪವೂ, ಅದರಿಂದ ಮರಣವೂ ಉಂಟಾಗುತ್ತದೆಯೇ ಹೊರ್ತು ಬೇರೊಂದರಿಂದ ಆಗದು. (೧೩—೧೫. ವ.) ದೇವರ ಸರ್ವಜ್ಞ ಚಿತ್ತದಲ್ಲಿ ಇಂಥಾ ಶೋಧನೆಗಳು ವಿಶ್ವಾಸವನ್ನು ಪರೀಕ್ಷಿಸುವವುಗಳಾಗಿಯೂ, ತಾಳ್ಮೆಯನ್ನೂ ದೃಢವನ್ನೂ ಉಂಟು ಮಾಡುವವುಗಳಾಗಿಯೂ, ಜೀವ ಹುಟ್ಟಿಸುವವುಗಳಾಗಿಯೂ ಇರುತ್ತವೆ. (೧೨. ವ.) ಬೆಂಕಿಗೆ ಮೈಲಿಗೆ ಅಂಟದಂತೆ ಪರಿಶುದ್ಧ ದೇವರಿಗೆ ಪಾಪವು ಅಂಟದು. ಆತನು ಅಬ್ರಹಾಮನನ್ನು ಶೋಧಿಸಿದ್ದು, ಅವನ ವಿಶ್ವಾಸವು ಪ್ರಕಟವಾಗುವಂತೆ ಶೋಧಿಸಿದನೇ ಹೊರ್ತು, ಅವನು ಕೆಟ್ಟದ್ದನ್ನು ಮಾಡುವ ಹಾಗೆ ಶೋಧಿಸಲಿಲ್ಲ. ಕೆಟ್ಟದ್ದನ್ನು ಮಾಡುವಂತೆ ಶೋಧಿಸುವವನು ಶೋಧಕನಾದ ಸೈತಾನನೇ.

4. ಇಚ್ಛೆಯು ಮನುಷ್ಯನ ಮನಸ್ಸಿನಲ್ಲಿ ಹುಟ್ಟಿ ಪಾಪವನ್ನು ಗರ್ಭಧರಿಸಿ, ಅದು ಸಂಪೂರ್ಣವಾಗುವಾಗ (ರೋಮಾ. ೬. ೨೩.) ಆತ್ಮಮರಣವನ್ನು ಹೆರುತ್ತದೆ. ಪಾಪದ ಉತ್ಪತ್ತಿಯೂ ವೃದ್ಧಿಯೂ ಫಲವೂ ಬಹಳ ಭಯಂಕರವಾದವುಗಳು.

5. ಮನುಷ್ಯರು ಮಾಡುವ ದುಷ್ಕ್ರಿಯೆಗಳಿಗೆ ದೇವರೇ ಕಾರಣನೆಂದು ಹೇಳುವದೂ, ಸಮಸ್ತ ಮೇಲುಗಳ ಬುಗ್ಗೆಯಾಗಿರುವ ಆತನಿಂದ ಸಮಸ್ತ ಮೇಲುಗಳು ಉತ್ಪತ್ತಿಯಾಗುವದಿಲ್ಲವೆಂದು ಹೇಳುವದೂ, ದೊಡ್ಡ ಮೋಸವಾಗಿದೆ. ಭಕ್ತರು ಇಂಥಾ ಮೋಸಕ್ಕೊಳಗಾಗದ ಹಾಗೆ ಯಾಕೋಬನು ಅವರನ್ನು ಪ್ರೀತಿಯಿಂದ ಎಚ್ಚರಿಸುತ್ತಾನೆ.

6. ಇದರಲ್ಲಿ ಸೂರ್ಯವನ್ನು ಉಪಮಾನವಾಗಿ ತೋರಿಸಿ ಇದೆ. ಪ್ರಕಾಶಗಳ ಮೂಲವಾಗಿರುವ ಸೂರ್ಯವು ಸ್ವಲ್ಪವಾದರೂ ಮಾರ್ಪಡದೆ ಯಾವಾಗಲೂ ಏಕ ರೀತಿಯಾಗಿದೆ. ಅದನ್ನು ಸುತ್ತಿ ಚರಿಸುವ ಗ್ರಹಗಳೂ ಅವುಗಳಿಗೆ ಶೇರಿದ ಚಂದ್ರಗಳೂ ಮಾರ್ಪಡುತ್ತವೆ. ಅವು ಸೂರ್ಯಕ್ಕೆ ವಿಮುಖವಾಗಿರುವಾಗ ತಿರುಗಾಟದ ನೆರಳಾದ ರಾತ್ರಿಯು ಸಂಭವಿಸುತ್ತದೆ. ಸೂರ್ಯ ಯಾವಾಗ್ಯೂ ಒಂದೇ ಪ್ರಕಾರ ಪ್ರಕಾಶಿಸಿ ಕೊಂಡಿರುತ್ತದೆ. ಅದೇ ಪ್ರಕಾರ ಬೆಳಕುಗಳ ತಂದೆಯಾದ ದೇವರು ತಿರುಗಾಟದ ನೆರಳು ಎಷ್ಟು ಮಾತ್ರವೂ ಇಲ್ಲದೆ, ಯಾವಾಗಲೂ ಸಕಲ ಮೇಲುಗಳ ಸ್ವರೂಪಿಯಾಗಿದ್ದಾನೆ. ಆತನನ್ನು ಬಿಟ್ಟು ತೊಲಗಿ ಹೋಗುವ ಮನುಷ್ಯರಲ್ಲಿ ಕತ್ತಲೆ ಎಂಬ ಪಾಪಮಲವು ಉಂಟಾಗಿರುತ್ತದೆ.



೧೯ [1]ಆದ ಕಾರಣ, ನನ್ನ ಪ್ರಿಯ ಸಹೋದರರೇ, ಪ್ರತಿ ಮನುಷ್ಯನು ಕೇಳುವದಕ್ಕೆ ತೀವ್ರವಾಗಿಯೂ,
೨೦ ಮಾತಾಡುವದಕ್ಕೆ ನಿಧಾನವಾಗಿಯೂ, ಕೋಪಕ್ಕೆ ನಿಧಾನವಾಗಿಯೂ ಇರಲಿ. ಯಾಕಂದರೆ ಮನು
ಷ್ಯನ ಕೋಪವು ದೇವರ ನೀತಿಯನ್ನು ನಡಿಸುವದಿಲ್ಲ.
೨೧ ಆದದರಿಂದ ಸಕಲ ಮೈಲಿಗೆಯನ್ನೂ, ಕೆಟ್ಟತನದ ಆಧಿಕ್ಯವನ್ನೂ ತೆಗೆದು ಹಾಕಿ, ನಿಮ್ಮ ಪ್ರಾಣಗಳನ್ನು
ರಕ್ಷಿಸ [2]ಸಾಮರ್ಥ್ಯವುಳ್ಳ, ಒಳನೆಟ್ಟ ವಾಕ್ಯವನ್ನು ಶಾಂತಿಯಿಂದ ಅಂಗೀಕರಿಸಿರಿ.
೨೨ ಇದಲ್ಲದೆ ನಿಮ್ಮನ್ನು ನೀವೇ ಮೋಸಗೊಳಿಸಿ, ವಾಕ್ಯವನ್ನು ಕೇಳುವವರು ಮಾತ್ರವಲ್ಲ, ಅದನ್ನು ಮಾಡು
೨೩ ವವರು ಆಗಿರಿ. ಯಾಕಂದರೆ ಯಾವನಾದರೂ ವಾಕ್ಯವನ್ನು ಮಾಡುವವನಲ್ಲ, ಕೇಳುವವನಾಗಿದ್ದರೆ,
೨೪ ಅವನು ತನ್ನ ಹುಟ್ಟುಮುಖವನ್ನು [3]ಕನ್ನಡಿಯಲ್ಲಿ ನೋಡುವ ಮನುಷ್ಯನಿಗೆ ಸಮಾನವಾಗಿದ್ದಾನೆ. ಹ್ಯಾಗಂ
ದರೆ ತನ್ನನ್ನು ನೋಡಿ, ಹೊರಟು ಹೋಗಿ, ಸಂಗಡಲೇ ತಾನು ಎಂಥವನೆಂದು ಮರೆತು ಬಿಡುವನು.
೨೫ ಆದರೆ [4]ಬಿಡುಗಡೆಯ ಸಂಪೂರ್ಣ ನ್ಯಾಯಪ್ರಮಾಣದಲ್ಲಿ [5]ಕಣ್ಣಿಟ್ಟು ನೋಡಿ ನೆಲೆಯಾಗಿರುವವನು, ಮರೆ
ಯುವ ಕೇಳುವವನಾಗಿರದೆ, ಕ್ರಿಯೆ ಮಾಡುವವನಾಗಿರುವದರಿಂದ, ತಾನು ಮಾಡುವದರಲ್ಲಿ ಭಾಗ್ಯವಂತ
ನಾಗಿರುವನು.
೨೬ ನಿಮ್ಮಲ್ಲಿ ಯಾವನಾದರೂ ತನ್ನ ನಾಲಿಗೆಗೆ ಕಡಿವಾಣವಿಡದೆ, ತನ್ನ ಹೃದಯವನ್ನು ಮೋಸಗೊಳಿಸಿ,
೨೭ ತಾನು [6]ಭಕ್ತನೆಂದನ್ನಿಸಿ ಕೊಂಡರೆ, ಇವನ ಭಕ್ತಿಯು ವ್ಯರ್ಥ. ತಂದೆಯಾದ ದೇವರ ಸನ್ನಿಧಿಯಲ್ಲಿ ಶುದ್ಧ
ವೂ [7]ನಿಷ್ಕಳಂಕವೂ ಆಗಿರುವ ಭಕ್ತಿಯು ಇದೇ—ದಿಕ್ಕಿಲ್ಲದವರನ್ನೂ ವಿಧವೆಯರನ್ನೂ ಅವರ ಉಪದ್ರದಲ್ಲಿ
ಪರಾಮರಿಸಿ, ಲೋಕದಿಂದ ತನ್ನನ್ನು ಕಳಂಕವಿಲ್ಲದೆ ಕಾಪಾಡಿ ಕೊಳ್ಳುವದೇ.

ಇಬ್ರೀಯ ಕ್ರೈಸ್ತರು ಪರಿಶುದ್ಧಾತ್ಮನಿಂದ ಪುನರ್ಜನ್ಮ ಹೊಂದಿ, ಪರಿಶುದ್ಧ ದೇವರಿಗೆ ತಕ್ಕ ಮಕ್ಕಳಾದ ವಿಷಯದಲ್ಲಿ ದೇವರ ಒಳ್ಳೇತನವು ಪ್ರಕಟವಾಯಿತು. ಅದು ತರುವಾಯ ಬರಲಿಕ್ಕಿರುವ ಮಹಾ ಬೆಳೆಗೆ ಪ್ರಥಮ ಫಲದ ಹಾಗಿತ್ತು. (೧೮. ವ.) ಮನುಷ್ಯನು ಸ್ವಇಚ್ಛೆಯಿಂದ ಪಾಪ ಮಾಡಿದರೂ, (೧೫. ವ.) ದೇವರು ತನ್ನ ಸ್ವಾಧೀನಚಿತ್ತದಿಂದ ಜೀವವನ್ನು ಹುಟ್ಟಿಸುವ ಸತ್ಯದ ವಾಕ್ಯದಿಂದ (ಯೋಹಾ. ೬. ೬೩. ೧ ಪೇತ್ರ. ೧. ೨೩.) ತನಗೆ ಮಕ್ಕಳನ್ನು ಹುಟ್ಟಿಸುತ್ತಾನೆ.

1. ಈ ಸತ್ಯಗಳನ್ನು ನೀವು ಅರಿತಿದ್ದರೆ, ಅವುಗಳನ್ನು ಶಾಂತದಿಂದ ಅಂಗೀಕರಿಸಿ ಅನುಸರಿಸ ಬೇಕು. ಹಾಗೆ ಮಾಡದೆ ಕೋಪಕ್ಕೂ ಜಗಳಕ್ಕೂ ಸ್ಥಳ ಕೊಟ್ಟರೆ, ಅದು ದೇವಸತ್ಯಕ್ಕೆ ಸರಿ ಬೀಳದು. ಈ ಸತ್ಯವಚನವನ್ನು ಕೇಳುವದಕ್ಕೆ ತೀವ್ರವಾಗಿಯೂ, ಅದನ್ನು ದೀರ್ಘವಾಗಿ ಯೋಚಿಸಿ ಮಾತಾಡುವದಕ್ಕೆ ನಿಧಾನವಾಗಿಯೂ, ಆತುರದಿಂದ ಕೋಪವಾಗಿ ಮಾತಾಡದೆ ನಿಧಾನವಾಗಿ ಮಾತಾಡುವವರಾಗಿಯೂ ಇರ ಬೇಕು. ಆದರೆ ಕೋಪಕ್ಕೆ ಸ್ಥಳ ಕೊಟ್ಟರೆ, ಪರಿಶುದ್ಧಾತ್ಮನ ಫಲವಾದ ನೀತಿ ತೋರಲಾರದು. (ಲೂಕ. ೯. ೫೫.)

2. ಪರಿಶುದ್ಧಾತ್ಮನು ಸುವಾರ್ತೆಯ ವಾಕ್ಯವನ್ನು ಆಯುಧವಾಗಿ ಪ್ರಯೋಗಿಸುವಾಗ, ಅದು ಅಕ್ರಮಗಳಲ್ಲಿ ಸತ್ತ ಮನುಷ್ಯನ ಆತ್ಮವನ್ನು ರಕ್ಷಿಸ ಶಕ್ತಿಯುಳ್ಳದ್ದಾಗಿರುತ್ತದೆ. (ರೋಮಾ. ೧. ೧೬.) ಹೃದಯದಲ್ಲಿ ನೆಟ್ಟ ಈ ವಾಕ್ಯವನ್ನು ತಾಳ್ಮೆಯಿಂದಲೂ ಶಾಂತಿಯಿಂದಲೂ ಅಂಗೀಕರಿಸಿ ಅದರ ಪ್ರಕಾರ ನಡಿಯುವವರಿಗೆ ಮಾತ್ರ ಆತ್ಮರಕ್ಷಣೆಯಾಗುವದು.

3. ದಿವ್ಯ ವಾಕ್ಯವನ್ನು ಅಂಗೀಕರಿಸುವವರು ಅದರ ಹಾಗೆ ಮಾಡುವವರಾಗಿರ ಬೇಕು. (ಮತ್ತಾ. ೭. ೨೧—೨೭.) ಆಗಲೇ ಈ ಸತ್ಯದ ಬೀಜವು ಮೊಳೆತು ಫಲ ಕೊಡುವದು. ಹಾಗೆ ಮಾಡದೆ, ಕೇಳಿದ ವಾಕ್ಯವನ್ನು ಮರೆತು ನಿಶ್ಚಿಂತೆಯಾಗಿರುವವನು, ಯೋಚನೆ ಇಲ್ಲದೆ ಕನ್ನಡಿಯಲ್ಲಿ ತನ್ನ ಮುಖವನ್ನು ನೋಡುವವನ ಹಾಗಿದ್ದಾನೆ. (೧ ಕೊರಿ. ೧೩. ೧೨. ವಚನದ ವ್ಯಾಖ್ಯಾನ ನೋಡ ಬೇಕು.) ಅವನು ತನ್ನ ರೂಪವನ್ನು ಶೀಘ್ರವಾಗಿ ಮರೆಯುವ ಪ್ರಕಾರ, ದಿವ್ಯ ವಾಕ್ಯವೆಂಬ ಕನ್ನಡಿಯಲ್ಲಿ ಯೋಚನೆ ಇಲ್ಲದೆ ನೋಡುವವನು ತನ್ನ ಅವಲಕ್ಷಣವನ್ನು ಮರೆತು ಪಾಪದಲ್ಲಿ ನಡಿಯುವನು.

4. ಸುವಾರ್ತೆಯ ಪ್ರಮಾಣವು ದೇವರ ಚಿತ್ತವನ್ನು ಪ್ರಕಟ ಮಾಡುವ ಬಿಡುಗಡೆಯ ಪ್ರಮಾಣವಾಗಿದೆ. (೧೮. ವ.) ಅದನ್ನು ಕಡ್ಡಾಯವಾಗಿ ಅಲ್ಲ, ಉತ್ಸಾಹದಿಂದ ಅಂಗೀಕರಿಸ ಬೇಕು. ಹೀಗೆ ಅಂಗೀಕರಿಸಿ ನಡಿಯುವವರು ತಮ್ಮ ಕ್ರಿಯೆಗಳಲ್ಲಿ ಭಾಗ್ಯವಂತರಾಗಿರುವರು. (ರೋಮಾ. ೮. ೨. ಯೋಹಾ. ೮. ೩೧, ೩೨.)

5. ಸುವಾರ್ತೆಯ ಪ್ರಮಾಣವನ್ನು ತಾತ್ಸಾರದಿಂದಲ್ಲ, ಬಹು ಅಕ್ಕರೆಯಾಗಿ ಜ್ಞಪ್ತಿಯಿಂದ ಕಣ್ಣಿಟ್ಟು ನೋಡಿ ನಡಿಯುವವರಿಗೆ ಮಾತ್ರ ಮೇಲಾದ ಭಾಗ್ಯ ಉಂಟಾಗುವದು. (ಯೋಹಾ. ೨೦. ೫. ೧ ಪೇತ್ರ. ೧. ೧೨.)

6. ನಾಲಿಗೆಯನ್ನು ಬಿಗಿ ಹಿಡಿಯದೆ, ಮೇರೆ ಇಲ್ಲದೆ ಮಾತಾಡುವದು ಭಕ್ತಿಯ ಸಮ್ಮಂಧವಲ್ಲ. ಇಲ್ಲಿ ಭಕ್ತಿ ಎಂಬುವದು ಭಕ್ತಿಗೆ ಗುರುತಾಗಿರುವ ಹೊರಗಿನ ಆಚಾರಕ್ರಮಗಳನ್ನು ಕುರಿತದ್ದು.

7. ತನ್ನ ಆತ್ಮವನ್ನು ಪಾಪವೆಂಬ ಕಳಂಕವೇನೂ ಇಲ್ಲದೆ ಕಾದು ಕೊಂಡು, ಆಧಾರವಿಲ್ಲದ ಬಡವರಿಗೆ ಬೇಕಾದ ಸಹಾಯ ಮಾಡಿ, ಪ್ರೀತಿಯಾಗಿಯೂ ಪರಿಶುದ್ಧವಾಗಿಯೂ ನಡಿಯುವದೇ ದೇವದಾಸರಿಗೆ ತಕ್ಕ ಲಕ್ಷಣವು. ಅದೇ ಉತ್ತಮ ಭಕ್ತಿ. ಹೀಗೆ ಪರಿಶುದ್ಧವೂ ಪರೋಪಕಾರವೂ ಇಲ್ಲದೆ ನಡಿಯುವವರ ಸೇವೆ ದೇವರಿಗೆ ಹಿತವಾದದ್ದಲ್ಲ.

ಪಕ್ಷಪಾತವಿಲ್ಲದೆ ಎಲ್ಲರಿಗೂ ಒಂದೇ ಪ್ರಕಾರ ಮಾಡ ತಕ್ಕ ಪ್ರೀತಿಯ ಸೇವೆ.

**2.** [1]ನನ್ನ ಸಹೋದರರೇ, ಮಹಿಮೆಯುಳ್ಳ ನಮ್ಮ ಕರ್ತನಾಗಿರುವ ಯೇಸು ಕ್ರಿಸ್ತನ [2]ವಿಶ್ವಾಸವನ್ನು ಮುಖ
೨ ದಾಕ್ಷಿಣ್ಯಗಳ ಸಂಗಡ ಇಟ್ಟು ಕೊಳ್ಳ ಬೇಡಿರಿ. ಹ್ಯಾಗಂದರೆ ಚಿನ್ನದ ಉಂಗರವುಳ್ಳ ಮನುಷ್ಯನು ಮಿಂ
ಚುವ ವಸ್ತ್ರವನ್ನು ಧರಿಸಿ ಕೊಂಡು, ನಿಮ್ಮ ಸಭೆಗೆ ಬರಲು, ಮತ್ತು ಬಡವನು ಮೈಲಿಗೆ ವಸ್ತ್ರವನ್ನು ಧರಿಸಿ
೩ ಕೊಂಡು ಬರಲು, ನೀವು ಮಿಂಚುವ ವಸ್ತ್ರ ಧರಿಸಿ ಕೊಂಡವನ ಮೇಲೆ ಲಕ್ಷ್ಯವಿಟ್ಟು, ಅವನಿಗೆ—ನೀವು ಸುಖ
ವಾಗಿ ಇಲ್ಲಿ ಕೂತು ಕೊಳ್ಳಿ! ಎಂದು ಹೇಳಿ, ಬಡವನಿಗೆ—ನೀನು ಅಲ್ಲೇ ನಿಂತುಕೋ! ಇಲ್ಲವೆ ಇಲ್ಲಿ ನನ್ನ
೪ ಪಾದಪೀಠದ ಹತ್ತಿರ ಕೂತುಕೋ ಅಂದರೆ, ನಿಮ್ಮಲ್ಲಿ ಪಕ್ಷಪಾತ ಮಾಡಿ ಕೊಂಡು, [3]ದುರಾಲೋಚನೆಗಳ
ನ್ಯಾಯಾಧಿಪತಿಗಳಾದಿರಲ್ಲ?
೫ ಕೇಳಿರಿ, ನನ್ನ ಪ್ರಿಯ ಸಹೋದರರೇ, ದೇವರು ಈ ಲೋಕದ ಬಡವರನ್ನು ವಿಶ್ವಾಸದಲ್ಲಿ ಐಶ್ವರ್ಯವಂತರಾ
ಗಿಯೂ, ತನ್ನನ್ನು ಪ್ರೀತಿ ಮಾಡುವವರಿಗೆ ವಾಗ್ದತ್ತ ಮಾಡಿದ ರಾಜ್ಯಕ್ಕೆ ಬಾಧ್ಯಸ್ಥರಾಗಿಯೂ, [4]ಆದು ಕೊ
೬ ಳ್ಳಲಿಲ್ಲವೋ? ಆದರೆ ನೀವು ಬಡವನನ್ನು ಅವಮಾನ ಮಾಡಿದ್ದೀರಿ. ಐಶ್ವರ್ಯವಂತರು ನಿಮ್ಮನ್ನು ಬಲಾತ್ಕ
೭ ರಿಸುತ್ತಾರಲ್ಲ? ಅವರೇ ನಿಮ್ಮನ್ನು ನ್ಯಾಯಸ್ಥಾನಗಳಿಗೆ ಎಳೆಯುತ್ತಾರಲ್ಲ? ನಿಮ್ಮ ಮೇಲೆ [5]ಹೇಳಲ್ಪಟ್ಟ
ಒಳ್ಳೇ ಹೆಸರನ್ನು ಅವರೇ ದೂಷಿಸುತ್ತಾರಲ್ಲ?
೮ ಆದರೆ, ಬರಹದ ಪ್ರಕಾರ, ನಿನ್ನ ನೆರೆಯವನನ್ನು ನಿನ್ನ ಹಾಗೆಯೇ ಪ್ರೀತಿ ಮಾಡು (ಲೇವಿ. ೧೯. ೧೮.)
೯ ಎಂಬ [6]ರಾಜಾಜ್ಞೆಯನ್ನು ಪೂರೈಸಿದರೆ, ಚನ್ನಾಗಿ ಮಾಡುತ್ತೀರಿ; ಆದರೆ ಮುಖದಾಕ್ಷಿಣ್ಯ ಮಾಡಿದರೆ,
೧೦ ಪಾಪ ಮಾಡುತ್ತೀರಿ. ಮತ್ತು ಮೀರಿದವರಂತೆ ನ್ಯಾಯಪ್ರಮಾಣದಿಂದ [7]ಖಂಡಿಸಲ್ಪಡುತ್ತೀರಿ. ಯಾಕಂದರೆ

1. ಸೃಷ್ಟಿಕರ್ತನಾದ ದೇವರಿಗೆ ತಕ್ಕದ್ದಲ್ಲದ ವಿಧವಾಗಿ ಪಕ್ಷಪಾತ ಮಾಡುವದು ಪಾಪವೆಂದೂ, (೨. ೧—೪.) ಅವರು ಅಲಕ್ಷ್ಯ ಮಾಡಿದ ಬಡವರನ್ನೇ ದೇವರು ಹೆಚ್ಚಿಸುತ್ತಾನೆಂದೂ, ಅವರು ಮೆಚ್ಚಿ ಘನ ಪಡಿಸಿದ ಐಶ್ವರ್ಯವಂತರಿಂದ ಆಗಾಗ್ಯೆ ಉಪದ್ರವೂ ಸಂಕಟವೂ ಸಂಭವಿಸುವದೆಂದೂ, (೫—೭. ವ.) ಪಕ್ಷಪಾತವೆಂಬ ದುರ್ಗುಣದಿಂದ ಪರಸ್ಪರ ಸ್ನೇಹವೆಂಬ ರಾಜಪ್ರಮಾಣವು ಭಂಗವಾಗುತ್ತದೆಂದೂ, ಹೀಗೆ ಅದನ್ನು ಮೀರುವವರು ಕೃಪೆ ಹೊಂದಲಾರರೆಂದೂ ಹೇಳುತ್ತಾನೆ. (೮—೧೩. ವ.)

2. ಮಹಿಮೆಯುಳ್ಳ ಕರ್ತನಾದ ಕ್ರಿಸ್ತನ ದೃಷ್ಟಿಯಲ್ಲಿ ನೀಚಕಸವಾಗಿ ತೋರುವ ಲೋಕದ ಸ್ಥಿತಿಗಳನ್ನೂ ಅಂತಸ್ತುಗಳನ್ನೂ ನೋಡಿ, ವಿಶ್ವಾಸದ ಪ್ರಕಾರ ಸಹೋದರರಾಗಿರುವವರನ್ನು ಪಕ್ಷಪಾತವಾಗಿ ನಡಿಸುವದು ದೋಷವಾಗಿದೆ. ಪಕ್ಷಪಾತ ಮಾಡುವದು ಸರಿಯಲ್ಲವೆಂದು ತೋರಿಸುವದಕ್ಕಾಗಿ ಭಕ್ತರೆಲ್ಲರು ಸಹೋದರರಾಗಿದ್ದಾರೆಂಬ ನ್ಯಾಯದಿಂದ ಯಾಕೋಬನು ಇಲ್ಲಿ, ನನ್ನ ಸಹೋದರರೇ! ಎಂದು ಪ್ರಾರಂಭಿಸುತ್ತಾನೆ.

3. ಅವರು ಪಕ್ಷಪಾತ ಮಾಡಿದ್ದಕ್ಕೆ ಇದರಲ್ಲಿ ಒಂದು ದೃಷ್ಟಾಂತವುಂಟು. ವಸ್ತ್ರಾಭರಣಾಲಂಕೃತರಾಗಿ ದೇವಾಲಯಕ್ಕೆ ಬರುವ ಘನವಂತನನ್ನು ಹೆಚ್ಚಿಸುವದೂ, ಮಾಸಿದ ಹರಕು ಬಟ್ಟೆಗಳನ್ನುಟ್ಟು ಕೊಂಡು ಬರುವ ಬಡವನನ್ನು ತಗ್ಗಿಸುವದೂ, ಪಕ್ಷಪಾತವೇ ಹೊರ್ತು, ಸಹೋದರಸ್ನೇಹವಲ್ಲ. ಹೀಗೆ ಮಾಡುವವರು ದುರಾಲೋಚಕರಾಗಿಯೂ ಸಹೋದರರಲ್ಲಿ ಭೇದವನ್ನು ಹುಟ್ಟಿಸುವವರಾಗಿಯೂ ಇದ್ದಾರೆ.

4. ದಯಾನಿಧಿಯಾದ ದೇವರು ತನ್ನ ಕೃಪೆಯಿಂದ ಆದು ಕೊಂಡವರು ಬಹುಶಾ ಅಲ್ಪರೂ ಬಡವರೇ ಹೊರ್ತು, ಕುಲೀನರೂ ಧನಿಕರೂ ಅಲ್ಲ. (೧ ಕೊರಿ. ೧. ೨೬—೨೮.) ಇವರೇ ದೇವರ ದೃಷ್ಟಿಯಲ್ಲಿ ಶ್ರೇಷ್ಠರು. ಇವರೇ ಪರಮ ರಾಜ್ಯದ ಬಾಧ್ಯಸ್ಥರು. ಇಂಥವರನ್ನು ಘನಹೀನ ಪಡಿಸುವದು ಮಹಾ ದೋಷವಾಗಿದೆ. (೬. ವ.)

5. ಇಲ್ಲಿ ಹೇಳಲ್ಪಟ್ಟ ಐಶ್ವರ್ಯವಂತರು ದೇವರ ಕೃಪೆ ಹೊಂದದಂಥ ಧನವಂತರೇ. ಅವರಿಂದ ಹಿಂಸೆಯೂ ಉಪದ್ರವೂ ಸಂಭವಿಸುತ್ತದೆ. ಅವರಿಂದ ಕ್ರಿಸ್ತನ ಒಳ್ಳೇ ಹೆಸರಿಗೆ ದೂಷಣೆ ಬರುತ್ತದೆ. (೧ ಪೇತ್ರ. ೪. ೧೬.) ಕ್ರೈಸ್ತರೆಲ್ಲರೂ ಈ ಶ್ರೇಷ್ಠ ನಾಮವನ್ನು ಸ್ನಾನದಲ್ಲಿ ಧರಿಸಿ ಕೊಳ್ಳುತ್ತಾರೆ. ಆ ಹೆಸರಿನಿಂದ ಆಶೀರ್ವದಿಸಲ್ಪಡುವಾಗಲೂ ಅದನ್ನು ಧರಿಸಿ ಕೊಳ್ಳುವವರಾಗಿದ್ದಾರೆ.

6. ಇದು ಎರಡನೇ ಹಲಿಗೆಯಲ್ಲಿದ್ದ ಆರು ಕಟ್ಟಳೆಗಳ ಸಾರಾಂಶವಾಗಿಯೂ, ಅವುಗಳಿಗೆ ಶ್ರೇಷ್ಠವಾದದ್ದಾಗಿಯೂ ಇರುವದರಿಂದ ಅದು ರಾಜಾಜ್ಞೆಯಾಗಿದೆ. (ಮತ್ತಾ. ೨೨. ೩೯, ೪೦. ಮಾರ್ಕ. ೧೨. ೨೯—೩೧.) ಅರಸುಗಳ ಅರಸನಾದ ಕ್ರಿಸ್ತನು ಮುಖ್ಯವಾದದ್ದೆಂದು ಹೇಳಿದ ಈ ಕಟ್ಟಳೆಯು ರಾಜಾಜ್ಞೆಯಾಗಿದೆ ಎಂಬುವದಕ್ಕೂ, ಇದನ್ನು ಮೀರುವದು ಮಹಾ ದೋಷವೆಂಬುವದಕ್ಕೂ ಸಂದೇಹವಿಲ್ಲ.

7. ನ್ಯಾಯಪ್ರಮಾಣವು ದೇವಾಧಿಕಾರ ಹೊಂದಿದ್ದಾಗಿರುವದರಿಂದ ಒಂದು ಕಟ್ಟಳೆಯನ್ನು ಮೀರುವವನು ನ್ಯಾಯಪ್ರಮಾಣವನ್ನು ಕೊಟ್ಟ ದೇವರಿಗೆ ವಿರೋಧವಾಗಿ ಕಲಹ ಮಾಡುವವನಾಗಿದ್ದಾನೆ. ಆದದರಿಂದ ಆಜ್ಞೆಗೆ ಪಾತ್ರನಾದ ಅಪರಾಧಿ ಎಂದು, ಅವನು ಮೀರಿದ ನ್ಯಾಯಪ್ರಮಾಣದಿಂದ ತೀರ್ಪು ಹೊಂದುವನು. ಒಂದು ಕಬ್ಬಿಣದ ಸರಪಣಿಯಲ್ಲಿರುವ ಅನೇಕ ಕೊಂಡಿಗಳಲ್ಲಿ ಒಂದು ಕೊಂಡಿ ಮುರಿದು ಹೋದರೆ, ಸರಪಣಿಯೇ ಮುರಿದ ಹಾಗಾಗುವದು. ಅದೇ ಪ್ರಕಾರ ಒಂದು ಸಣ್ಣ ಕಟ್ಟಳೆಯನ್ನು ಮೀರುವವನು ಬೇರೆ ಕಟ್ಟಳೆಗಳನ್ನು ಕೈಕೊಂಡಿದ್ದಾಗ್ಯೂ, ಎಲ್ಲಾ ಕಟ್ಟಳೆಗಳನ್ನು ಮೀರಿದವನಾಗಿದ್ದಾನೆ.



ಯಾವನಾದರೂ ಸಮಸ್ತ ನ್ಯಾಯಪ್ರಮಾಣವನ್ನು ಕೈಕೊಂಡು, ಒಂದರಲ್ಲಿ ತಪ್ಪಿದರೆ, ಸಮಸ್ತಕ್ಕೂ ಅಪ
೧೧ ರಾಧಿಯಾದನು. ಹ್ಯಾಗಂದರೆ ವ್ಯಭಿಚಾರ ಮಾಡ ಬೇಡೆಂದು ಹೇಳಿದವನೇ, ಕೊಲ್ಲ ಬೇಡೆಂದು ಸಹ
(ಹೊರ. ೨೦. ೧೩, ೧೪.) ಹೇಳಿದ್ದಾನೆ. ಹೀಗಿರಲಾಗಿ ನೀನು ವ್ಯಭಿಚಾರ ಮಾಡದವನಾಗಿ, ಕೊಂದರೆ,
ನ್ಯಾಯಪ್ರಮಾಣವನ್ನು ಮೀರುವವನಾದಿ.
೧೨ [1]ಬಿಡುಗಡೆಯ ನ್ಯಾಯಪ್ರಮಾಣದಿಂದ ನ್ಯಾಯತೀರ್ವಿಕೆಯನ್ನು ಹೊಂದಲಿರುವವರಿಗೆ ತಕ್ಕ ಹಾಗೆಯೇ
೧೩ ಮಾತಾಡಿರಿ; ಹಾಗೆಯೇ ಮಾಡಿರಿ. ಯಾಕಂದರೆ ಕರುಣೆ ತೋರಿಸದವನಿಗೆ ನ್ಯಾಯತೀರ್ವಿಕೆಯು ಕರುಣೆ
ಇಲ್ಲದೆ ಇರುವದು; ಆದರೆ ಕರುಣೆಯು ನ್ಯಾಯತೀರ್ವಿಕೆಯ ಮೇಲೆ ಹೆಚ್ಚಳ ಪಡುತ್ತದೆ.

ಕ್ರಿಯೆಗಳಿಲ್ಲದ ವಿಶ್ವಾಸವು; ಕ್ರಿಯೆಗಳುಳ್ಳ ವಿಶ್ವಾಸವೇ ಶ್ರೇಷ್ಠವಾದದ್ದೆಂದು ತೋರಿಸಿದ ದೃಷ್ಟಾಂತಗಳು.

೧೪ [2]ನನ್ನ ಸಹೋದರರೇ, ಒಬ್ಬನು, ತನಗೆ ವಿಶ್ವಾಸ ಉಂಟೆಂದು ಹೇಳಿ, ಕ್ರಿಯೆಗಳಿಲ್ಲದೆ ಇದ್ದರೆ, ಪ್ರಯೋಜನ
೧೫ ವೇನು? ಆ [3]ವಿಶ್ವಾಸವು ಅವನನ್ನು ರಕ್ಷಿಸೀತೋ? ಆದರೆ ಸಹೋದರನಾಗಲಿ, ಸಹೋದರಿಯಾಗಲಿ, ಬೆತ್ತ
೧೬ ಲೆಯಾಗಿಯೂ ಅನುದಿನದ ಆಹಾರದಲ್ಲಿ ಕೊರತೆ ಪಡುವವರಾಗಿಯೂ ಇರಲಾಗಿ, ನಿಮ್ಮಲ್ಲಿ ಒಬ್ಬನು—
ಸಮಾಧಾನವಾಗಿ ಹೋಗಿರಿ; ಬೆಂಕಿ ಕಾಸಿ ಕೊಳ್ಳಿರಿ; ತೃಪ್ತಿಯಾಗಿರಿ, ಎಂದು ಅವರಿಗೆ ಹೇಳಿ, ಶರೀರಕ್ಕೆ
೧೭ ಅವಶ್ಯವಾದವುಗಳನ್ನು ಕೊಡದೆ ಇದ್ದರೆ, ಪ್ರಯೋಜನವೇನು? ಅದೇ ಪ್ರಕಾರ ವಿಶ್ವಾಸವು, ಕ್ರಿಯೆಗಳಿಲ್ಲ
೧೮ ದ್ದಾಗಿದ್ದರೆ, ತನ್ನಲ್ಲಿ ಸತ್ತದ್ದಾಗಿದೆ. ಆದರೆ ಒಬ್ಬನು—ನಿನಗೆ ವಿಶ್ವಾಸವುಂಟು; ನನಗೆ ಕ್ರಿಯೆಗಳುಂಟು.
[4]ಕ್ರಿಯೆಗಳಿಲ್ಲದೆ ನಿನ್ನ ವಿಶ್ವಾಸವನ್ನು ನನಗೆ ತೋರಿಸು; ಮತ್ತು ನಾನು ನನ್ನ ಕ್ರಿಯೆಗಳಿಂದ ನನ್ನ ವಿಶ್ವಾಸವ
೧೯ ನ್ನು ನಿನಗೆ ತೋರಿಸುವೆನು, ಎಂದು ಹೇಳ್ಯಾನು. ದೇವರು ಒಬ್ಬನೇ ಎಂದು ನೀನು ನಂಬುತ್ತೀ; [5]ಚನ್ನಾಗಿ
೨೦ ಮಾಡುತ್ತೀ; ದೆವ್ವಗಳು ಸಹ ನಡುಗಿ ನಂಬುತ್ತವೆ. ಆದರೆ, ಓ ವ್ಯರ್ಥ ಮನುಷ್ಯನೇ, ಕ್ರಿಯೆಗಳಿಲ್ಲದ
ವಿಶ್ವಾಸವು ಸತ್ತದ್ದೆಂದು [6]ತಿಳಿಯ ನಿನಗೆ ಮನಸ್ಸುಂಟೋ?

1. (೧. ೨೫. ವಚನದ ವ್ಯಾಖ್ಯಾನ ನೋಡ ಬೇಕು.) ಸ್ವಾಧೀನಪ್ರಮಾಣವಾದ ಸುವಾರ್ತೆಯ ಪ್ರಮಾಣದಿಂದ ನ್ಯಾಯತೀರ್ವಿಕೆ ಹೊಂದಲಿರುವವರು, ಅದರ ಅರ್ಥವೂ ಸಾರವೂ ಆಗಿರುವ ಪೂರ್ಣ ಪ್ರೀತಿಯುಳ್ಳವರಾಗಿ ನಡಿಯ ಬೇಕು. ನ್ಯಾಯತೀರ್ವಿಕೆಯ ಮೇಲೆ ಕರುಣೆಯು ಹೆಚ್ಚಳ ಪಡುವದರಿಂದ (೧೩. ವ.) ಬೇರೊಬ್ಬರಿಗೆ ಕರುಣೆ ತೋರಿಸದವರು ಕರುಣೆ ಹೊಂದಲಾರರು. (ಮತ್ತಾ. ೫. ೭; ೬. ೧೨, ೧೪, ೧೫; ೧೮. ೨೧—೩೫.) ಕರುಣಾನಿಧಿಯಾದ ದೇವರಿಗೆ ಆಜ್ಞೆನಿರ್ಣಯವಲ್ಲ, ಕರುಣೆಯೇ ಪ್ರಿಯವಾಗಿದೆ. ಆದದರಿಂದ ಆತನ ಮಕ್ಕಳೆಲ್ಲರೂ ಆತನ ಹಾಗೆಯೇ ಕರುಣೆಯುಳ್ಳವರಾಗಿರ ಬೇಕು. (ಲೂಕ. ೬. ೩೬.) ಕರುಣೆ ತೋರಿಸದವರು ಆತನ ಬಳಿಯಲ್ಲಿ ಕರುಣೆಯನ್ನಲ್ಲ, ನೀತಿಯಾದ ನ್ಯಾಯತೀರ್ವಿಕೆಯನ್ನೇ ಹೊಂದುವರು.

2. ಸದ್ಗುಣ ಸತ್ಕ್ರಿಯೆಗಳಿಲ್ಲದೆ ದಿವ್ಯ ಸತ್ಯಗಳನ್ನು ವಿಶ್ವಾಸಿಸುವದರಿಂದ ಮಾತ್ರ ಆತ್ಮರಕ್ಷಣೆಯುಂಟಾಗುವದೆಂದು ಆ ಕಾಲದ ಕ್ರೈಸ್ತರಲ್ಲಿ ಕೆಲವರು ಎಣಿಸಿದ ತಪ್ಪಾದ ಎಣಿಕೆಯನ್ನು ಗ್ರಂಥಕರ್ತನು ಖಂಡಿಸುವದರಲ್ಲಿ, ಕ್ರಿಯೆ ಇಲ್ಲದ ಪ್ರೀತಿಯು ನಿಷ್ಪ್ರಯೋಜನವಾಗಿರುವ ಪ್ರಕಾರ, ಫಲವಿಲ್ಲದ ವಿಶ್ವಾಸವು ನಿರ್ಜೀವವಾದದ್ದೆಂದೂ, ದೆವ್ವಗಳ ವಿಶ್ವಾಸಕ್ಕಿಂತ ಶ್ರೇಷ್ಠವಾದದ್ದಲ್ಲವೆಂದೂ, (೧೪—೧೯.ವ.) ಫಲವುಳ್ಳ ವಿಶ್ವಾಸದಿಂದಲೇ ಅಬ್ರಹಾಮನೂ ರಹಾಬಳೂ ನೀತಿವಂತರಾಗಿ ತೋರಿದರೆಂದೂ, (೨೦—೨೫.ವ.) ಆತ್ಮವಿಲ್ಲದ ಶರೀರವು ಸತ್ತದ್ದಾಗಿರುವ ಪ್ರಕಾರ ಫಲವಿಲ್ಲದ ವಿಶ್ವಾಸವು ಸತ್ತದ್ದಾಗಿದೆ ಎಂದೂ ಹೇಳುತ್ತಾನೆ. (೨೬. ವ.)

3. ಕ್ರಿಯೆಗಳಿಲ್ಲದ ವಿಶ್ವಾಸವು ಒಬ್ಬನನ್ನು ರಕ್ಷಿಸಲಾರದು. ಬಾಯಿಯಿಂದ ಪ್ರೀತಿಯಾದ ಮಾತುಗಳನ್ನಾಡಿ, ಕೈಯಿಂದ ಪ್ರೀತಿಯ ಕ್ರಿಯೆಗಳನ್ನು ಮಾಡದವನ ವಿಶ್ವಾಸವು ಫಲವಿಲ್ಲದೆ ಸತ್ತಮರಕ್ಕೆ ಸಮಾನವಾಗಿ ನಿಷ್ಪ್ರಯೋಜನವಾದದ್ದಾಗಿರುತ್ತದೆ.

4. ಇಲ್ಲಿ ಫಲವುಳ್ಳಂಥ ವಿಶ್ವಾಸವುಳ್ಳ ಒಬ್ಬ ಭಕ್ತನು, ನಿಷ್ಫಲವಾದ ವಿಶ್ವಾಸವುಳ್ಳ ಒಬ್ಬ ಭಕ್ತಿಹೀನನ ಸಂಗಡ ತರ್ಕ ಮಾಡುವ ಭಾವನೆಯಾಗಿ ತೋರಿಸಿ ಇದೆ. ಕ್ರಿಯೆಗಳಿಲ್ಲದ ವಿಶ್ವಾಸವು ಮತ್ತೊಬ್ಬರಿಗೆ ತೋರಲಾರದು. ಕ್ರಿಯೆಗಳಲ್ಲಿ ತೋರಿದ ವಿಶ್ವಾಸವು ಎಲ್ಲರಿಗೂ ಪ್ರತ್ಯಕ್ಷವಾಗಿ ತೋರುವದು. ಹೀಗಿರುವದರಿಂದ ಕ್ರಿಯೆ ಸಹಿತವಾದ ವಿಶ್ವಾಸವುಳ್ಳವನು, ಕ್ರಿಯೆ ಇಲ್ಲದ ವಿಶ್ವಾಸಿಯನ್ನು ನೋಡಿ, ನಿನ್ನ ವಿಶ್ವಾಸವನ್ನು ನನಗೆ ತೋರಿಸು ಎಂದು ಧೈರ್ಯವಾಗಿ ಕೇಳುತ್ತಾನೆ.

5. ಒಬ್ಬನೇ ದೇವರಿದ್ದಾನೆಂಬುವದು ಒಳ್ಳೇದೇ. ಆದರೆ, ಅಷ್ಟೇ ಮಾತ್ರವಾದರೆ, ಇದು ದೇವರುಂಟೆಂದು ನಂಬುವ ದೆವ್ವಗಳ ವಿಶ್ವಾಸಕ್ಕೆ ಸಮಾನವಾಗಿಯೂ, ಅವುಗಳಿಗೆ ನಡುಗು ಉಂಟು ಮಾಡುವ ಪ್ರಕಾರ, ನಡುಗಿಸ ತಕ್ಕದ್ದಾಗಿಯೂ ಇರುವದೇ ಹೊರ್ತು, ಬೇರೇನು ಅಲ್ಲ.

6. ಕ್ರಿಯೆಗಳಿಲ್ಲದ ವಿಶ್ವಾಸವು ಸತ್ತದ್ದೆಂದು ತಿಳಿಯ ಬೇಕಾದರೆ, ಅಬ್ರಹಾಮನು ರಹಾಬಳು ಎಂಬವರ ಚರಿತ್ರೆಗಳನ್ನು ಯೋಚಿಸಿದರೆ, ತಿಳಿಯಲಾಗುವದು.

೨೧ [1]ನಮ್ಮ ತಂದೆಯಾದ ಅಬ್ರಹಾಮನು ತನ್ನ ಮಗನಾದ ಇಸಾಕನನ್ನು ಬಲಿಪೀಠದ ಮೇಲೆ ಅರ್ಪಿಸಿ, ಕ್ರಿಯೆ
೨೨ ಗಳಿಂದ ನೀತಿನಿರ್ಣಯ ಪಡಲಿಲ್ಲವೋ? ವಿಶ್ವಾಸವು ಅವನ ಕ್ರಿಯೆಗಳ ಸಂಗಡ ಯತ್ನೈಸಿತೆಂದೂ, [2]ಕ್ರಿಯೆ
೨೩ ಗಳಿಂದ ಅವನ ವಿಶ್ವಾಸವು ಸಂಪೂರ್ಣವಾಯಿತೆಂದೂ, ನೋಡುತ್ತೀ. ಇದಲ್ಲದೆ ಅಬ್ರಹಾಮನು ದೇವರನ್ನು
ವಿಶ್ವಾಸಿಸಿದನು; ಅದು ಅವನಿಗೆ ನೀತಿ ಎಂದು ಎಣಿಸಲ್ಪಟ್ಟಿತು, (ಉತ್ಪ. ೧೫. ೬.) ಎಂಬ ಬರಹವು [3]ಈಡೇ
೨೪ ರಿತು. ಮತ್ತು ದೇವರ ಸ್ನೇಹಿತನೆಂದು ಕರೆಯಲ್ಪಟ್ಟನು. ಹಾಗಾದರೆ, ವಿಶ್ವಾಸ ಮಾತ್ರದಿಂದಲ್ಲ, ಕ್ರಿಯೆಗ
ಳಿಂದ ಮನುಷ್ಯನು ನೀತಿನಿರ್ಣಯ ಪಡುತ್ತಾನೆಂದು ನೋಡುತ್ತೀರಿ.
೨೫ ಅದೇ ಮೇರೆಗೆ ಸೂಳೆಯಾದ [4]ರಹಾಬಳು ಸಹ ದೂತರನ್ನು ಸೇರಿಸಿ ಕೊಂಡು, ಬೇರೆ ಮಾರ್ಗದಿಂದ
೨೬ ಹೊರಗೆ ಕಳುಹಿಸಿ, ಕ್ರಿಯೆಗಳಿಂದ ನೀತಿನಿರ್ಣಯ ಪಡಲಿಲ್ಲವೋ? ಹ್ಯಾಗಂದರೆ, ಆತ್ಮವಿಲ್ಲದ ಶರೀರವು
ಹ್ಯಾಗೆ ಸತ್ತದ್ದಾಗಿದೆಯೋ, ಹಾಗೆಯೇ ಕ್ರಿಯೆಗಳಿಲ್ಲದ ವಿಶ್ವಾಸವು [5]ಸತ್ತದ್ದು.

ನಾಲಿಗೆಯನ್ನು ಬಿಗಿ ಹಿಡಿಯದೆ ಇರುವದರಿಂದ ಉಂಟಾಗುವ ಕೇಡು; ವ್ಯರ್ಥ ತರ್ಕಗಳು
ಪರಮಜ್ಞಾನಕ್ಕೆ ಹೊಂದಿದವುಗಳಲ್ಲ.

3. [6]ನನ್ನ ಸಹೋದರರೇ, ನಮಗೆ ಹೆಚ್ಚಾದ ಆಜ್ಞೆ ಆಗುವದೆಂದು ತಿಳಿದು, ಅನೇಕರು [7]ಬೋಧಕರಾಗ ಬೇ



೨ ಡಿರಿ. ಯಾಕಂದರೆ ನಾವೆಲ್ಲರು ಬಹಳ [1]ತಪ್ಪುತ್ತೇವೆ; ಒಬ್ಬನು ವಾಕ್ಯದಲ್ಲಿ ತಪ್ಪದೆ ಇದ್ದರೆ, ಅವನು ಶರೀ
೩ ರಕ್ಕೆಲ್ಲಾ ಕಡಿವಾಣ ಹಾಕಿ ನಡಿಸ ಸಮರ್ಥನಾಗಿರುವ ಸಂಪೂರ್ಣನಾದ ಮನುಷ್ಯನಾಗಿದ್ದಾನೆ. ಇಗೋ,
ಅವು ನಮಗೆ ವಿಧೇಯವಾಗುವ ಹಾಗೆ, ಕುದುರೆಗಳ ಬಾಯಿಗಳಲ್ಲಿ ಕಡಿವಾಣಗಳನ್ನು ಹಾಕಿ, ಅವುಗಳ
೪ ಶರೀರವನ್ನೆಲ್ಲಾ ತಿರುಗಿಸುತ್ತೇವೆ. ಇಗೋ, ಅಷ್ಟು ದೊಡ್ಡವುಗಳಾಗಿದ್ದು, ಬಿರುಘಾಳಿಗಳಿಂದ ನೈಯಲ್ಪಡುವ
ಹಡಗಗಳು ಸಹ ಬಹು ಸಣ್ಣ ಚುಕಾಣಿಯಿಂದ [2]ನಡಿಸುವವನ ಮನಸ್ಸು ಬಂದಲ್ಲಿಗೆ ತಿರುಗಿಸಲ್ಪಡುತ್ತವೆ.
೫ ಅದೇ ಪ್ರಕಾರ ನಾಲಿಗೆ ಸಣ್ಣ ಅಂಗವಾಗಿದೆ; ಆದರೆ ತನ್ನನ್ನು ಬಹಳವಾಗಿ ಹೆಚ್ಚಿಸಿ ಕೊಳ್ಳುತ್ತದೆ. ಇಗೋ,
೬ ಸ್ವಲ್ಪ ಬೆಂಕಿಯು ಎಷ್ಟು [3]ದೊಡ್ಡ ಅಡವಿಯನ್ನು ಹೊತ್ತಿಸುತ್ತದೆ. ನಾಲಿಗೆಯು ಸಹ ಬೆಂಕಿಯೂ [4]ಅನ್ಯಾ
ಯದ ಲೋಕವೂ ಆಗಿದೆ. ಹೀಗೆ ನಾಲಿಗೆಯು ಶರೀರವನ್ನೆಲ್ಲಾ ಕಳಂಕ ಮಾಡುವಂಥಾದ್ದಾಗಿಯೂ,
[5]ಜನ್ಮಚಕ್ರವನ್ನು ದಹಿಸುವಂಥಾದ್ದಾಗಿಯೂ, [6]ನರಕದಿಂದ ದಹಿಸಲ್ಪಡುವಂಥಾದ್ದಾಗಿಯೂ, ನಮ್ಮ ಅಂಗಗ
೭ ಳೊಳಗೆ ಇರುತ್ತದೆ. ಯಾಕಂದರೆ ಮೃಗ, ಪಕ್ಷಿ, ಕ್ರಿಮಿ, ಜಲಜಂತುಗಳ ಜಾತಿಯೆಲ್ಲಾ [7]ಮನುಷ್ಯಜಾತಿ
೮ ಯಿಂದ ಸಾಧು ಮಾಡಲ್ಪಡುತ್ತದೆ, ಮತ್ತು ಸಾಧು ಮಾಡಲ್ಪಟ್ಟದೆ; ಆದರೆ ನಾಲಿಗೆಯನ್ನು ಮನುಷ್ಯ
ರಲ್ಲಿ ಯಾವನೂ ಸಾಧು ಮಾಡಲಾರನು; ಅದು ಸ್ವಾಧೀನವಾಗದ ಕೇಡು; ಮರಣಕರವಾದ ವಿಷದಿಂದ
೯ ತುಂಬಿ ಅದೆ. ಆದರಿಂದ ತಂದೆಯಾದ ದೇವರನ್ನು ಆಶೀರ್ವದಿಸುತ್ತೇವೆ; ಅದರಿಂದಲೇ ದೇವರ ಹೋಲ್ವಿಕೆಯ

1. ಅಬ್ರಹಾಮನ ದೃಷ್ಟಾಂತವು ಯೆಹೂದ್ಯರಿಗೆ ತಕ್ಕ ದೃಷ್ಟಾಂತವಾದದರಿಂದ ಗ್ರಂಥಕರ್ತನು ಅದನ್ನು ಮುಂದಾಗಿ ಹೇಳುತ್ತಾನೆ.

2. ಅಬ್ರಹಾಮನ ವಿಷಯದಲ್ಲಿ ವಿಶ್ವಾಸವೂ ಕ್ರಿಯೆಯೂ ಒಂದಾಗಿ ಕೂಡಿ ಪ್ರಕಟವಾಯಿತು. ವಿಶ್ವಾಸದಿಂದುಂಟಾದ ಕ್ರಿಯೆಯಿಂದ ಅವನಿಗೆ ಸುಕೃತ ಫನ ಉಂಟಾಯಿತು. ವಿಶ್ವಾಸವಿಲ್ಲದಿದ್ದರೆ, ಅವನಲ್ಲಿ ವಿಧೇಯತ್ವ ಉಂಟಾಗಲಾರದು. ಆ ವಿಧೇಯತ್ವದಿಂದ ಅವನ ವಿಶ್ವಾಸವು ಅಭಿವೃದ್ಧಿ ಹೊಂದಿ ಸಂಪೂರ್ಣವಾಯಿತು.

3. ಅವನ ವಿಶ್ವಾಸದಿಂದ ಅವನಿಗೆ ಆಶೀರ್ವಾದ ಉಂಟಾಗುವದೆಂಬ ಬರಹವು, ಅಥವಾ, ವಾಗ್ದತ್ತವು (ಉತ್ಪ. ೧೫. ೬.) ಈ ವಿಷಯದಲ್ಲಿ ಪೂರ್ಣವಾಗಿ ಈಡೇರಿತು.

4. (ಯೆಹೋಶು. ೨. ೧, ೨. ಇಬ್ರಿ. ೧೧. ೩೧.) ರಹಾಬಳು ಇಸ್ರಯೇಲಿನ ದೇವರಲ್ಲಿ ಇಟ್ಟ ನಂಬಿಕೆಯಿಂದ ಚಾರರಾದ ದೂತರನ್ನು ಸೇರಿಸಿ ಕೊಂಡು, ಬೇರೆ ಮಾರ್ಗವಾಗಿ ಕಳುಹಿಸಿ ಬಿಟ್ಟಳು. ಅವಳ ವಿಶ್ವಾಸವು ಅವಳು ಮಾಡಿದ ಈ ಕ್ರಿಯೆಯಿಂದ ತೋರಿತು. ಹೀಗೆ ಕ್ರಿಯೆಗಳಿಂದ ತೋರದ ವಿಶ್ವಾಸವು ನಿರ್ಜೀವವಾದ ಶರೀರದ ಹಾಗೆ ಸತ್ತದ್ದಾಗಿದೆ.

5. ೧೪—೨೬. ವರೆಗಿರುವ ವಚನಗಳಲ್ಲಿ ಅಡಗಿರುವ ಯಾಕೋಬನ ಉಪದೇಶಕ್ಕೂ, ರೋಮಾ. ೩. ೨೭, ೨೮; ೪. ೧—೮. ವರಿಗೂ ಇರುವ ವಚನಗಳಲ್ಲಿ ಅಡಗಿರುವ ಪೌಲನ ಉಪದೇಶಕ್ಕೂ ವಿಕಲ್ಪವೇನೂ ಇಲ್ಲವೆಂದು ತಿಳಿಯ ಬೇಕು. ಪೌಲನು ತಮ್ಮ ಸ್ವಂತ ನೀತಿಯನ್ನು ನಂಬಿ, ಕ್ರಿಸ್ತನ ಮಹಾ ಪುಣ್ಯವನ್ನು ಅನುಸರಿಸದೆ ಇದ್ದವರ ಸಂಗಡ ಸಂಭಾಷಿಸುವದರಿಂದ, ಕ್ರಿಯೆಗಳಿಂದಲ್ಲ, ವಿಶ್ವಾಸದಿಂದಲೇ ನೀತಿವಂತರಾಗುತ್ತೇವೆಂದು ಹೇಳುತ್ತಾನೆ. ಯಾಕೋಬನು, ರಕ್ಷಣೆಯ ವಿಷಯದಲ್ಲಿ ಸತ್ಕ್ರಿಯೆಗಳೂ ಪರಿಶುದ್ಧ ನಡತೆಯೂ ಅವಶ್ಯವಲ್ಲ, ವಿಶ್ವಾಸ ಮಾತ್ರವಿದ್ದರೆ ಸಾಕೆಂದು ಸಾಧಿಸುವವರ ಸಂಗಡ ವಾಗ್ವಾದ ಮಾಡುವದರಿಂದ, ಕ್ರಿಯೆಗಳನ್ನು ಮುಖ್ಯ ಪಡಿಸಿ ಮಾತಾಡುತ್ತಾನೆ. ಬೇರೆ ಪ್ರಕಾರ ಅವರಿಬ್ಬರ ಉಪದೇಶಗಳಲ್ಲಿ ವ್ಯತ್ಯಾಸವೇನೂ ಇಲ್ಲ. ಪೌಲನು ಪ್ರೀತಿಯಿಂದ ಕ್ರಿಯೆ ಮಾಡುವ ವಿಶ್ವಾಸವೇ ಪ್ರಯೋಜನವಾದದ್ದೆಂದು ಹೇಳುತ್ತಾನೆ. (ಗಲಾ. ೫. ೬.) ಯಾಕೋಬನು ವಿಶ್ವಾಸದ ಫಲವಾಗಿಯೂ ಸಾಕ್ಷಿಯಾಗಿಯೂ ಇರುವ ಸತ್ಕ್ರಿಯೆಗಳು ಇರ ಬೇಕು, ಅನ್ನುತ್ತಾನೆ. (ಯಾಕೋಬ. ೨. ೧೪, ೨೪.) ಪೌಲನು ಸತ್ಕ್ರಿಯೆಗಳು ಅವಶ್ಯವಿಲ್ಲವೆಂದು ಹೇಳುವದೇ ಇಲ್ಲ; ಯಾಕೋಬನು ವಿಶ್ವಾಸವು ಅವಶ್ಯವಿಲ್ಲವೆಂದು ಹೇಳುವದೂ ಇಲ್ಲ. ಒಬ್ಬನು ವೃಕ್ಷವನ್ನು ಕುರಿತೂ, ಇನ್ನೊಬ್ಬನು ಅದರಲ್ಲಿ ಉಂಟಾಗುವ ಫಲವನ್ನು ಕುರಿತೂ ಹೇಳುತ್ತಾರೆಂದು ನೆನಸ ಬೇಕು. ವಿಶ್ವಾಸವೇ ವೃಕ್ಷವು; ಸತ್ಕ್ರಿಯೆಗಳೇ ಫಲಗಳು. ವೃಕ್ಷವಿಲ್ಲದೆ ಫಲ ಬರಲಾರದು. ಫಲವಿಲ್ಲದ ವೃಕ್ಷವು ಕೆಲಸಕ್ಕೆ ಬಾರದ ಗೊಡ್ಡು ಮರವೇ ಹೊರ್ತು ಒಳ್ಳೇ ಮರವಲ್ಲ. ಈ ವ್ಯತ್ಯಾಸವರಿತವರು ಪೌಲನ ಉಪದೇಶಕ್ಕೂ ಯಾಕೋಬನ ಉಪದೇಶಕ್ಕೂ ಬಹಳ ವ್ಯತ್ಯಾಸವಿಲ್ಲವೆಂದು ಗ್ರಹಿಸುವರು.

6. ಸಭೆಯಲ್ಲಿ ಪ್ರಸಂಗಿಸ ತಕ್ಕ ಶ್ಲಾಘ್ಯವನ್ನು, ಚನ್ನಾಗಿ ಕಲಿಯದ ಕ್ರೈಸ್ತರು ಅಲಕ್ಷ್ಯವುಳ್ಳವರಾಗಿರುವ ಕಾರಣ, ನಾಲಿಗೆಯನ್ನು ಬಿಗಿ ಹಿಡಿಯದೆ, ತಮ್ಮ ಮನಸ್ಸು ಬಂದ ಹಾಗೆ ಬೋಧನೆ ಮಾಡುವವರಿಗೆ ಅಧಿಕ ದಂಡನೆ ಬರುವದೆಂದು ತೋರಿಸಿ ಇದೆ. (೩. ೧, ೨.) ನಾಲಿಗೆ ಚಿಕ್ಕ ಅಂಗವಾಗಿದ್ದಾಗ್ಯೂ, ಅದು ದೊಡ್ಡ ಕೇಡನ್ನು ಉಂಟು ಮಾಡ ತಕ್ಕದ್ದಾಗಿರುವದರಿಂದಲೂ, ಅದನ್ನು ಸರಿಯಾಗಿ ಪ್ರಯೋಗಿಸುವದು ಕಷ್ಟವಾಗಿರುವದರಿಂದಲೂ, ಅದನ್ನು ಯಾವಾಗಲೂ ಬಿಗಿ ಹಿಡಿಯುವದು ಅವಶ್ಯವಾಗಿದೆ. (೩—೧೨. ವ.) ನಿಜ ಜ್ಞಾನಿಯಾಗಿರುವವನು ಜಂಭವಾದ ಮಾತುಗಳನ್ನಾಡದೆ, ಅಡಕವಾಗಿಯೂ ಶಾಂತವಾಗಿಯೂ ನಡಿಯುವದರಿಂದ ನಿಜ ಜ್ಞಾನಿ ಎಂದೂ, ಅದರ ಮೇಲುಗಳನ್ನು ಅನುಭವಿಸುವವನೆಂದೂ ತೋರುವನು. (೧೩—೧೮. ವ.)

7 ಇದು ಮುಂಚಿನ ಸಂಧಿಯ ಕಡೇ ವಚನಗಳಿಗೆ ಸಮ್ಮಂಧಪಟ್ಟದ್ದಾಗಿದೆ. ಫಲವಿಲ್ಲದ ವಿಶ್ವಾಸವುಳ್ಳವರು ಬೋಧಕೋದ್ಯೋಗವನ್ನು ನಡಿಸುವದಕ್ಕೆ ಅಧಿಕ ಆಶೆ ತೋರಿಸುವರು. ಕ್ರಿಸ್ತಮಾರ್ಗದ ಸತ್ಯಗಳಲ್ಲಿ ಬಹಳ ಅನುಭವವಿಲ್ಲದ ಉತ್ತಮ ಕ್ರೈಸ್ತರಿಗೆ ಸಹ ಇಂಥಾ ಶೋಧನೆ ಸಂಭವಿಸುವದು. (೧ ತಿಮೊ. ೩. ೬.) ಮನುಷ್ಯರು ಮಾತಾಡುವ ಒಂದೊಂದು ವ್ಯರ್ಥ ಮಾತಿಗೂ ದೇವರಿಗೆ ಲೆಖ್ಖ ಒಪ್ಪಿಸ ಬೇಕಾದರೆ, (ಮತ್ತಾ. ೧೨. ೩೬.) ಫಲವೂ ಪ್ರಯೋಜನವೂ ಇಲ್ಲದ ಮಾತುಗಳಿಂದ ಅನೇಕರ ಆತ್ಮಗಳಿಗೆ ನಷ್ಟ ಉಂಟು ಮಾಡಿದ ಬೋಧಕರಿಗೆ ಎಷ್ಟೋ ಅಧಿಕ ದಂಡನೆ ಬರುವದು. ಸಭೆಯಲ್ಲಿ ಭಕ್ತಿವೃದ್ಧಿಯಾಗುವದಕ್ಕೆ ಒಬ್ಬರಿಗೊಬ್ಬರು ಬುದ್ಧಿ ಹೇಳ ತಕ್ಕದ್ದಾಗಿದ್ದಾಗ್ಯೂ, (೧ ಕೊರಿ. ೧೪. ೨೬—೩೩.) ತಕ್ಕ ಯೋಚನೆಯೂ ಬೋಧಿಸ ಶಕ್ತಿಯೂ ಇಲ್ಲದೆ, ಬಾಯಿಗೆ ಬಂದ ಹಾಗೆ ಮಾತಾಡುವವರಿಗೆ ಬೋಧಕೋದ್ಯೋಗ ಕೊಡುವದು ತಕ್ಕದ್ದಲ್ಲ.

1. ವಿವೇಕಿಗಳೂ ನಿಪುಣರೂ ಆಗಿರುವವರು ಸಹ ಅನೇಕ ವಿಷಯಗಳಲ್ಲಿ ತಪ್ಪುವದುಂಟು. ನಾಲಿಗೆಯನ್ನು ಬಿಗಿ ಹಿಡಿಯದೆ ಇರುವದರಿಂದಲೇ ಅಧಿಕವಾಗಿ ತಪ್ಪುತ್ತಾರೆ. ತನ್ನ ನಾಲಿಗೆಯನ್ನು ಬಿಗಿ ಹಿಡಿಯುವವನೇ ಸಮರ್ಥನು. ಕೀರ್ತನೆಗಾರನ ಹಾಗೆ, ನನ್ನ ಬಾಯಿ ಅತಿಕ್ರಮಿಸುವದಿಲ್ಲವೆಂದು ನಿಶ್ಚಯ ಮಾಡಿದ್ದೇನೆ, ಎಂದು ಹೇಳ ತಕ್ಕವನೇ ಸಂಪೂರ್ಣನು. (ಕೀರ್ತ. ೧೭. ೩.)

2. ನಡಿಸುವವನು ಅಂದರೆ, ಚುಕಾಣಿಯನ್ನು ಹಿಡಿದು ನಡಿಸುವ ನಾವಿಕನು. (೩—೫. ವ.) ನಾಲಿಗೆಯನ್ನು ಕಡಿವಾಣಕ್ಕೂ, ಚುಕಾಣಿಗೂ, ಸ್ವಲ್ಪ ಬೆಂಕಿಗೂ ಉಪಮಾನವಾಗಿ ಹೇಳಿ ಇದೆ. ಕಡಿವಾಣವಿಲ್ಲದ ಕುದುರೆಯಿಂದಲೂ, ಚುಕಾಣಿ ಇಲ್ಲದ ಹಡಗದಿಂದಲೂ, ಕಣ್ಣು ನೋಡದ ಬೆಂಕಿಯ ಕಿಡಿಯಿಂದಲೂ, ದೊಡ್ಡ ನಷ್ಟವು ಸಂಭವಿಸುವ ಪ್ರಕಾರ, ನಿಬಂಧನೆ ಇಲ್ಲದ ನಾಲಿಗೆಯಿಂದ ದೊಡ್ಡ ಕೇಡು ಸಂಭವಿಸುವದು. ನಾಲಿಗೆಯು ಸಣ್ಣದಾಗಿದ್ದರೂ, ಅದರಿಂದ ಬಹಳ ಮೇಲಾದರೂ ಬಹಳ ಕೇಡಾದರೂ ಬರ ಬಹುದಾದ ಕಾರಣ ಅದನ್ನು ಬಿಗಿ ಹಿಡಿದು ನಡಿಸ ತಕ್ಕದ್ದಾಗಿದೆ.

3. ಬೆಂಕಿಯ ಒಂದು ಕಿಡಿಯಿಂದ ದೊಡ್ಡ ಅಡವಿ ಸುಟ್ಟು ಹೋಗುವ ಪ್ರಕಾರ, ಒಂದು ಸಣ್ಣ ಕಠಿಣ ಮಾತಿನಿಂದ ಅನೇಕರ ಮನಸ್ಸು ನೊಂದು ಹುಣ್ಣಾಗುವದುಂಟು. "ಬೆಂಕಿಯಿಂದ ಸುಟ್ಟ ಘಾಯವು ಆರುವದು, ನಾಲಿಗೆಯಿಂದ ಸುಟ್ಟ ಘಾಯವು ಎಂದಿಗೂ ಆರದು" ಎಂಬ ಗಾದೆಯುಂಟು.

4. ಲೋಕದಲ್ಲಿ ಅನ್ಯಾಯವು ತುಂಬಿರುವ ಪ್ರಕಾರ, ನಾಲಿಗೆಯಲ್ಲಿ ಅನ್ಯಾಯವು ತುಂಬಿ ಇದೆ.

5. ಸಣ್ಣ ಅಂಗವಾದ ನಾಲಿಗೆಯಿಂದ ಉಂಟಾಗುವ ಕೇಡು ಶರೀರವನ್ನೆಲ್ಲಾ ಕೆಡಿಸಿ ಜನ್ಮಚಕ್ರವನ್ನು ದಹಿಸಿ ಬಿಡುತ್ತದೆ. ಒಬ್ಬ ಮನುಷ್ಯನು ಒಂದು ಅಯುಕ್ತವಾದ ಮಾತಿನಿಂದ ತನ್ನ ಯೋಗ್ಯತೆಯನ್ನು ಕಳಕೊಂಡು, ತನ್ನ ಆಯುಸ್ಸಿನ ಕಾಲವೆಲ್ಲಾ ಅಪಕೀರ್ತಿಯನ್ನೂ ನಷ್ಟವನ್ನೂ ಹೊಂದುವದನ್ನು ಆಗಾಗ್ಯೆ ಪ್ರತ್ಯಕ್ಷವಾಗಿ ಕಾಣ ಬಹುದು.

6. ತನಗೂ ಮತ್ತೊಬ್ಬರಿಗೂ ಉಂಟು ಮಾಡಿದ ನಷ್ಟವೆಂಬ ಬೆಂಕಿಯುಳ್ಳ ನಾಲಿಗೆಯು ಕೆಟ್ಟ ಮಾತುಗಳನ್ನಾಡ ಸೈತಾನನಿಂದ ಪ್ರೇರೇಪಿಸಲ್ಪಟ್ಟದೆ.

7. ಮೃಗ, ಪಕ್ಷಿ, ಕ್ರಿಮಿ, ಮತ್ಸ್ಯ ಮುಂತಾದವುಗಳ ಸ್ವಭಾವವನ್ನು ಮನುಷ್ಯನು ತನ್ನ ಶ್ರೇಷ್ಠ ಸ್ವಭಾವದಿಂದ ವಶ ಮಾಡಿಕೊಂಡು ಆಳುವದುಂಟು. ನಾಲಿಗೆ ಎಂಬ ಸಣ್ಣ ಅಂಗವನ್ನು ದೇವರ ಕೃಪೆಯಿಂದಲೇ ಹೊರ್ತು, ಮನುಷ್ಯನು ತನ್ನ ಸ್ವಂತ ಬಲದಿಂದ ವಶ ಮಾಡ ಕೂಡದು. ಅದು ದುಷ್ಟ ಕ್ರೂರ ಮೃಗಕ್ಕಿಂತಲೂ, ವಶವಾಗದಂಥಾ ಕೇಡುಳ್ಳದ್ದೂ, ಆಲಕಾಲವಿಷಕ್ಕಿಂತ ಅಧಿಕ ಮರಣಹೇತುವಾದ ವಿಷವುಳ್ಳದ್ದೂ ಆಗಿದೆ. ದೇವರನ್ನು ಸ್ತುತಿಸುವ ನಾಲಿಗೆಯಿಂದ, ದೇವರ ಹೋಲ್ವಿಕೆಯ ಹಾಗೆ ಸೃಷ್ಟಿಸಲ್ಪಟ್ಟ ಮನುಷ್ಯನನ್ನು ಶಪಿಸುವದು ಮಹಾ ಪಾಪವಾಗಿದೆ. ಸೃಷ್ಟಿಯಲ್ಲಿ ಇಂಥಾ ಕೊರತೆ ಯಾವದೂ ಇಲ್ಲ. ಒಂದೇ ಬುಗ್ಗೆಯಿಂದ ಶೀನೀರೂ ಉಪ್ಪುನೀರೂ ಊರುವದಿಲ್ಲ. ಅತ್ತೀಮರವು ಇಪ್ಪೇ ಹಣ್ಣುಗಳನ್ನೂ, ದ್ರಾಕ್ಷೇ ಗಿಡ ಅತ್ತೀ ಹಣ್ಣುಗಳನ್ನೂ ಫಲಿಸುವದಿಲ್ಲ. ಉಪ್ಪುನೀರಿನ ಬುಗ್ಗೆಯಿಂದ ಶೀನೀರು ಊರದೆ ಇರುವ ಪ್ರಕಾರ, ಶಪಿಸುವ ನಾಲಿಗೆಯಿಂದ ದೇವರ ಸ್ತೋತ್ರ ಹೊರಡಲಾರದು.

೧೦ ಪ್ರಕಾರ ಹುಟ್ಟಿದ ಮನುಷ್ಯರನ್ನು ಶಪಿಸುತ್ತೇವೆ. ಅದೇ ಬಾಯಿಯೊಳಗಿಂದ ಆಶೀರ್ವಾದವೂ ಶಾಪವೂ
ಹೊರಡುತ್ತವೆ.
೧೧ ನನ್ನ ಸಹೋದರರೇ, ಇವು ಹಾಗಿರ ಬಾರದು. ಬುಗ್ಗೆಯು ಒಂದೇ ಬಾಯಿಯಿಂದ ಶೀಯನ್ನೂ ಕಹಿಯ
೧೨ ನ್ನೂ ಹರಿಯ ಮಾಡುವದುಂಟೇ? ನನ್ನ ಸಹೋದರರೇ, ಅಂಜೂರದ ಮರವು ಇಪ್ಪೇ ಕಾಯಿಗಳನ್ನೂ,
ದ್ರಾಕ್ಷೇ ಬಳ್ಳಿಯು ಅಂಜೂರದ ಫಲಗಳನ್ನೂ, ಫಲಿಸಲಾಗುವದೋ? ಹಾಗೆಯೇ ಯಾವ ಬುಗ್ಗೆಯಾದರೂ
ಉಪ್ಪುನೀರನ್ನೂ ಶೀನೀರನ್ನೂ ಕೊಡಲಾರದು.

೧೩ [1]ನಿಮ್ಮಲ್ಲಿ ಜ್ಞಾನಿಯೂ ಬುದ್ಧಿವಂತನೂ ಯಾವನು? ಒಳ್ಳೇ ನಡತೆಯಿಂದ ಜ್ಞಾನದ ಸಾತ್ವಿಕತ್ವದಲ್ಲಿ ತನ್ನ
೧೪ ಕ್ರಿಯೆಗಳನ್ನು ತೋರಿಸಲಿ. ಆದರೆ ಕಹಿಯಾದ ಹೊಟ್ಟೆಕಿಚ್ಚೂ ಜಗಳವೂ ನಿಮ್ಮ ಹೃದಯದಲ್ಲಿದ್ದರೆ, ಸತ್ಯ
೧೫ ಕ್ಕೆ ವಿರೋಧವಾಗಿ ಹೆಚ್ಚಳ ಪಡದೆ, ಸುಳ್ಳಾಡದೆ, ಇರ್ರಿ. ಈ ಜ್ಞಾನವು ಮೇಲಿನಿಂದ ಇಳಿಯುವಂಥಾದ್ದಲ್ಲ,
೧೬ ಭೂಮಿಗೂ, [2]ಪ್ರಾಣಭಾವಕ್ಕೂ, ದೆವ್ವಗಳಿಗೂ ಸಮ್ಮಂಧವಾದದ್ದೇ. ಹ್ಯಾಗಂದರೆ ಹೊಟ್ಟೆಕಿಚ್ಚೂ ಜಗಳ
೧೭ ವೂ ಎಲ್ಲಿಯೋ, ಅಲ್ಲಿ ಗಲಿಬಿಲಿಯೂ ಎಲ್ಲಾ ದುಷ್ಕ್ರಿಯೆಗಳೂ ಇರುವವು. ಆದರೆ [3]ಮೇಲಿನಿಂದಾದ ಜ್ಞಾನವು
ಮೊದಲು ನಿರ್ಮಲವೂ, ಆ ಮೇಲೆ ಸಮಾಧಾನ ಶಾಂತಿ ಸಮ್ಮತಿ ಉಳ್ಳದ್ದೂ, ಕರುಣೆಯಿಂದಲೂ ಒಳ್ಳೇ
೧೮ ಫಲಗಳಿಂದಲೂ ಪೂರಿತವಾದದ್ದೂ, ಮುಖದಾಕ್ಷಿಣ್ಯ ಕಪಟಗಳಿಲ್ಲದ್ದೂ, ಆಗಿದೆ. ಮತ್ತು [4]ನೀತಿಯ ಫಲ
ವು ಸಮಾಧಾನ ಮಾಡುವವರಿಗೆ ಸಮಾಧಾನದಲ್ಲಿ ಬಿತ್ತಲ್ಪಡುತ್ತದೆ.

1. ನಿಮ್ಮಲ್ಲಿ ಜ್ಞಾನಿಯೂ ವಿವೇಕಿಯೂ ಆದ ಬೋಧಕನು (೧. ವ.) ಜ್ಞಾನದ ಪ್ರಕಾರ ತನ್ನ ಬೋಧನೆಯನ್ನು ಸದ್ಗುಣ ಸತ್ಕ್ರಿಯೆಗಳಿಂದ ತೋರ ಮಾಡ ಬೇಕು. ವಿರೋಧವೂ ಮಾನಾಭಿಲಾಷೆಯೂ ಉಳ್ಳವರು ತಾವು ಜ್ಞಾನಿಗಳೆಂದು ಹೆಚ್ಚಳ ಪಟ್ಟರೆ, ಸತ್ಯಕ್ಕೆ ವಿರೋಧವಾಗಿ ಸುಳ್ಳು ಹೇಳುವವರಾಗಿದ್ದಾರೆ. ಅವರ ಜ್ಞಾನವು ಪರಲೋಕದಿಂದ ಆದದ್ದಲ್ಲ. (೧೫. ವ.)

2. (೧ಕೊರಿ. ೨. ೧೪. ವಚನದ ವ್ಯಾಖ್ಯಾನ ನೋಡ ಬೇಕು.) ವಾಗ್ವಾದವೂ ಹೊಟ್ಟೆಕಿಚ್ಚೂ ಭೂಸಮ್ಮಂಧವಾದದ್ದೇ ಹೊರ್ತು, ಪರಲೋಕಸಮ್ಮಂಧವಾದದ್ದಲ್ಲ. ಭೂಸಮ್ಮಂಧವಾದ ಜ್ಞಾನವು ಭೂಮಿಯಲ್ಲಿರ ತಕ್ಕದ್ದೇ ಹೊರ್ತು ಪರಕ್ಕೆ ಸಲ್ಲಲಾರದು. ಮತ್ತು ಅದು ಪ್ರಾಣಭಾವದ್ದಾದದರಿಂದ ಆತ್ಮಭಾವದ್ದಲ್ಲ. ಲೌಕಿಕವಾದ ಪ್ರಾಣಭಾವದ ಈ ಜ್ಞಾನವು ಹುಚ್ಚುತನವಾಗಿರುವದು. ಪರದಲ್ಲಿ ಭೇದವನ್ನುಂಟು ಮಾಡಿದ ತಂತ್ರವುಳ್ಳ ಪಿಶಾಚನು ಈ ಭೂಮಿಯಲ್ಲಿಯೂ ಭೇದ ಉಂಟು ಮಾಡುತ್ತಾನೆ. ಆದದರಿಂದ ಅಂಧಕಾರದ ಪ್ರಭುವಿನ ಜ್ಞಾನವು ಬೆಳಕುಗಳ ತಂದೆಯಿಂದ ಬಂದದ್ದಲ್ಲ.

3. ಭೂಸಮ್ಮಂಧವಾದ ಜ್ಞಾನದ ಲಕ್ಷಣಗಳನ್ನು ಹೇಳಿದ ತರುವಾಯ ಪರಲೋಕಸಮ್ಮಂಧವಾದ ಜ್ಞಾನದ ಲಕ್ಷಣಗಳನ್ನು ಕುರಿತು ಹೇಳಿ ಇದೆ. ಸೂರ್ಯನಿಂದ ಕಿರಣಗಳು ಹೊರಡುವ ಪ್ರಕಾರ ಪರಂಜ್ಯೋತಿಯಾದ ದೇವರಿಂದ ಜ್ಞಾನವೆಂಬ ಕಿರಣಗಳು ಹೊರಡುತ್ತವೆ. ತನ್ನನ್ನೂ ದೇವರನ್ನೂ ಸರಿಯಾದ ಪ್ರಕಾರ ತಿಳಿಯ ಮಾಡುವ ಈ ಜ್ಞಾನವು ಮೊದಲು ಶುದ್ಧವಾಗಿದೆ. ಅಶುದ್ಧ ಸ್ಥಳದ ಮೇಲೆ ಬೀಳುವ ಸೂರ್ಯಕಿರಣವು ಅಶುದ್ಧವಾಗದೆ ಇರುವ ಪ್ರಕಾರ, ಪಾಪಲೋಕದಲ್ಲಿ ತೋರುವ ದೇವರ ಜ್ಞಾನವು ಕಳಂಕವಾಗದೆ ಶುದ್ಧವಾಗಿದೆ. ೨ನೇದು, ಸಮಾಧಾನವುಳ್ಳದ್ದು; ದೇವರ ಸಮಾಧಾನ ಹೊಂದಿದ ಮನಸ್ಸು ಯಾವಾಗಲು ಸಮಾಧಾನವನ್ನು ಪ್ರೀತಿ ಮಾಡಿ ಅದನ್ನು ನಡಿಸುವದು. ೩ನೇದು, ಶಾಂತವುಳ್ಳದ್ದು; ಕಠಿಣ ಮಾತಾಡಲಾರದು, ಕೋಪ ಮಾಡದು. ೪ನೇದು, ಸಮ್ಮತಿ ಉಳ್ಳದ್ದು; ನನಗಿಂತ ಸಮರ್ಥನಿಲ್ಲವೆಂದು ಹೆಚ್ಚಳ ಪಡದೆ, ಮತ್ತೊಬ್ಬರ ನಿಷ್ಕಪಟವಾದ ಅಭಿಪ್ರಾಯಗಳಿಗೆ ಸಮ್ಮತಿಸಿ ನಡಿಯುವದು. ೫ನೇದು, ಕರುಣೆಯಿಂದ ಭರಿತವಾದದ್ದು; ಕಷ್ಟ ಪಡುವವರನ್ನು ಕರುಣಿಸಿ, ಉಚಿತವಾಗಿ ತಾನು ಹೊಂದಿದ್ದನ್ನು ಅವರಿಗೂ ಉಚಿತವಾಗಿ ಕೊಡುವ ಸ್ವಭಾವವುಳ್ಳದ್ದು. ೬ನೇದು, ಸತ್ಫಲಪೂರಿತವಾದದ್ದು; ಇದು ತನ್ನಾನ ಮಾತು ಹೇಳಿ ಸುಮ್ಮನಿರದೆ, ಪರೋಪಕಾರಚಿಂತೆಯಿಂದ ಅನ್ಯರಿಗೆ ಇಹ ಪರ ಮೇಲುಗಳುಂಟಾಗ ತಕ್ಕ ಯತ್ನ ಮಾಡುವದು. ೭ನೇದು, ಮುಖದಾಕ್ಷಿಣ್ಯವಿಲ್ಲದ್ದು, ಹಿರಿ ಕಿರಿಯರೆಂಬ ಭೇದವಿಲ್ಲದೆ ಸರ್ವರ ಮೇಲನ್ನನುಸರಿಸಿ ನಡಿಯುವದು. ೮ನೇದು, ಕಪಟವಿಲ್ಲದ್ದು; ಬೆಳಕಿನಲ್ಲಿ ಕಳಂಕವಿಲ್ಲದ ಪ್ರಕಾರ ಪರಮ ಜ್ಞಾನದಲ್ಲಿ ಕಪಟವಿರದು. ಜ್ಞಾನದ ವಿಷಯ ಯಾಕೋಬನು ಹೇಳಿದ ಈ ಲಕ್ಷಣಗಳು, ಪೌಲನು ಪ್ರೀತಿಯ ವಿಷಯ ಹೇಳಿದ ಲಕ್ಷಣಗಳಿಗೆ ಸರಿಯಾಗಿವೆ. (೧ಕೊರಿ. ೧೩. ೪—೭.)

4. ಹೊಟ್ಟೆಕಿಚ್ಚು ಜಗಳಗಳಿಗೆ ಫಲವಿರುವ ಪ್ರಕಾರ (೧೬. ವ.) ಸಮಾಧಾನಕ್ಕೂ ಫಲವುಂಟು. ಅದು ನೀತಿ ಎಂಬ ಫಲವೇ. (ಇಬ್ರಿ. ೧೨. ೧೧.) ಸಮಾಧಾನವೆಂಬ ಬೀಜ ಬಿತ್ತುವವರು ನೀತಿ ಎಂಬ ಫಲವನ್ನು ಇಹದಲ್ಲಿ ಕೊಂಚವಾಗಿಯೂ ಪರದಲ್ಲಿ ಅಧಿಕವಾಗಿಯೂ ಹೊಂದಿ ಹರ್ಷಿಸುವರು.



ಮನಸ್ಸಿನಲ್ಲಿ ಹುಟ್ಟುವ ಕೆಟ್ಟ ಗುಣಗಳನ್ನು ಖಂಡಿಸಿದ್ದು; ದೇವರಿಗೆ ವಿಧೇಯರಾಗಿರ ಆಜ್ಞಾಪಿಸಿದ್ದು.

4. [1]ಯುದ್ಧಗಳೂ ಜಗಳಗಳೂ [2]ನಿಮ್ಮಲ್ಲಿ ಎಲ್ಲಿಂದ ಬರುತ್ತವೆ? ನಿಮ್ಮ ಅಂಗಗಳಲ್ಲಿ ಜಗಳಾಡುವ ನಿಮ್ಮ
೨ [3]ಆಶೆಗಳಿಂದಲ್ಲವೋ? ನೀವು ಆಶಿಸಿ, ಹೊಂದುವದಿಲ್ಲ; [4]ಕೊಲ್ಲುತ್ತೀರಿ, ಹೊಟ್ಟೆಕಿಚ್ಚು ಪಡುತ್ತೀರಿ; ಸಂಪಾ
ದಿಸಲಾರಿರಿ; ಹೋರಾಡಿ, ಯುದ್ಧ ಮಾಡುತ್ತೀರಿ; ನೀವು ಬೇಡಿ ಕೊಳ್ಳದ ಕಾರಣ, ನಿಮಗೆ ಶಿಕ್ಕುವದಿಲ್ಲ.
೩ ಬೇಡಿ ಕೊಂಡರೂ, ನಿಮ್ಮ ಆಶೆಗಳಲ್ಲಿ ವೆಚ್ಚ ಮಾಡುವ ಹಾಗೆ, [5]ತಪ್ಪಾಗಿ ಬೇಡಿ ಕೊಳ್ಳುವ ಕಾರಣ, ನೀವು
ಹೊಂದುವದಿಲ್ಲ.
೪ ಜಾರರೇ, [6]ಜಾರೆಯರೇ, ಲೋಕದ ಸ್ನೇಹವು ದೇವರಿಗೆ ಶತ್ರುತ್ವವೆಂದು ಅರಿಯರಾ? ಹಾಗಾದರೆ, ಲೋಕಕ್ಕೆ
೫ ಸ್ನೇಹಿತನಾಗ [7]ಬೇಕೆಂಬುವವನು ದೇವರಿಗೆ ಶತ್ರುವಾಗಿದ್ದಾನೆ. ಇಲ್ಲವೆ, ನಮ್ಮಲ್ಲಿ ವಾಸವಾಗಿರುವ ಆತ್ಮವು
೬ ಹೊಟ್ಟೆಕಿಚ್ಚಾಗಿ ಆಶೆ ಮಾಡುತ್ತದೆಂದು, [8]ಬರಹವು ಸುಮ್ಮನೆ ಹೇಳುತ್ತದೆಂಬದಾಗಿ, ನೆನಸುತ್ತೀರಾ? ಆದರೆ
ಅಧಿಕವಾದ ಕೃಪೆಯನ್ನು ಕೊಡುತ್ತಾನೆ. ಆದದರಿಂದ, ದೇವರು ಗರ್ವಿಷ್ಠರನ್ನು [9]ಎದುರಿಸಿ, ದೀನರಿಗೆ ಕೃಪೆ
೭ ಯನ್ನು ಕೊಡುತ್ತಾನೆಂದು, (ಸಾಮ. ೩. ೩೪.) ಹೇಳುತ್ತದೆ. ಹಾಗಾದರೆ, ದೇವರಿಗೆ ಒಳ ಬೀಳಿರಿ.

1. ಯೆಹೂದ್ಯ ಕ್ರೈಸ್ತರಲ್ಲಿ ಉಂಟಾಗಿದ್ದ ವಾಗ್ವಾದಗಳನ್ನೂ ಜಗಳಗಳನ್ನೂ ಕುರಿತು ಹೇಳಿದ ತರುವಾಯ, (೩. ೧೪.) ಲೋಕದ ಸುಖಭೋಗಗಳ ವಿಷಯವಾದ ಅಪೇಕ್ಷೆಯೇ ಅವುಗಳಿಗೆ ಕಾರಣವೆಂದು ತೋರಿಸಿ, (೪. ೧—೩.) ಹೀಗೆ ನಡಿಯುವವರು ದೈವದ್ರೋಹಿಗಳೆಂದೂ, ಅವರು ಗುಣ ಪಟ್ಟು ಪಶ್ಚಾತ್ತಾಪದಿಂದ ದೇವರ ಬಳಿಗೆ ಬಂದರೆ, ಆತನ ಕೃಪೆ ಉಂಟಾಗುವದೆಂದೂ ತೋರಿಸಿ, (೪—೧೦. ವ.) ಇದಕ್ಕೆ ಸಮ್ಮಂಧವಾದ ನಿಂದೆ (೧೧ ೧೨. ವ.) ಸಕಲ ಕಾರ್ಯಗಳಲ್ಲಿಯೂ ದೇವರನ್ನು ನಂಬದೆ ಇರುವದೂ (೧೩—೧೭. ವ.) ಆದ ಈ ಎರಡು ಪಾಪಗಳನ್ನು ಖಂಡಿಸಿ ಇದೆ.

2. ಯುದ್ಧಗಳು ಅಂದರೆ, ಜನಸಂಘ, ಧೊರೆತನ ಮುಂತಾದ ವಿಷಯ ಹಲವು ಕಕ್ಷಿಗಾರರಲ್ಲಿ ಉಂಟಾದ ವಾಗ್ವಾದಗಳು. ಇಂಥಾ ಕಲಹಗಳೂ ಝಗಳಗಳೂ ಯೆರೂಸಲೇಮಿನ ನಾಶನಕ್ಕೆ ಮುಂಚಿದ್ದ ಯೆಹೂದ್ಯರಲ್ಲಿ ಅಧಿಕವಾಗಿದ್ದವೆಂಬುವದನ್ನು ಅಪೊಸ್ತಲರ ಕ್ರಿಯೆಗಳ ವ್ಯಾಖ್ಯಾನದ ಅನುಬಂಧದಲ್ಲಿ ನೋಡ ಬಹುದು.

3. ಲೋಕದಾಶೆಗಳು ಹೃದಯವೆಂಬ ಗುಡಾರದಲ್ಲಿ ದಂಡಿಳಿದು, ಶರೀರದ ಅಂಗಗಳಿಂದ ಯುದ್ಧ ಮಾಡುವ ಶತ್ರುಗಳಾಗಿದ್ದವು.

4. ವೇದದಲ್ಲಿ ಹಗೆಯನ್ನು ಕೊಲೆ ಎಂದು ಹೇಳಿ ಇದೆ. (೧ಯೋಹಾ. ೩. ೧೫.) ಇಂಥಾ ಹಗೆ ಎಂಬ ಕೊಲೆಯೂ ಹೊಟ್ಟೆಕಿಚ್ಚೂ ಉಳ್ಳವರು, ಸಕಲ ದುರ್ಗುಣಗಳನ್ನು ಹಗೆ ಮಾಡುವ ದೇವರ ಆಶೀರ್ವಾದವನ್ನು ಹ್ಯಾಗೆ ಹೊಂದುವರು? ಕೊಲೆ ಎಂಬುವದು ಒಂದು ವೇಳೆ ಅವರು ಮಾಡಿದ ಕೊಲೆಪಾತಕವನ್ನೇ ಕುರಿತು ಹೇಳಿರ ಬಹುದು. ಯೆರೂಸಲೇಮಿನ ನಾಶನಕ್ಕೆ ಮುಂಚೆ ಆ ಪಟ್ಣದಲ್ಲಿಯೂ ಬೇರೆ ಊರುಗಳಲ್ಲಿಯೂ ಅವರಲ್ಲಿ ನಡೆದ ವಾಗ್ವಾದಗಳಿಂದ ಆಗಾಗ್ಯೆ ಕೊಲೆಪಾತಕಗಳೂ ಸಂಭವಿಸಿದವು. ಅಂಥವರಿಗೆ ದೇವರ ಕೃಪೆ ಹ್ಯಾಗೆ ಶಿಕ್ಕುವದು?

5. ಆಶೆಗಳನ್ನು ಪೂರೈಸುವದಕ್ಕೆ ವೆಚ್ಚ ಮಾಡ ಬೇಕೆಂದು ಮಾಡುವ ಪ್ರಾರ್ಥನೆ ಅಯುಕ್ತ ಪ್ರಾರ್ಥನೆಯಾಗಿರುವದರಿಂದ ದೇವರಿಗೆ ಅಸಮರ್ಪಕವಾಗಿರುವದು. ಅಂಥಾ ಪ್ರಾರ್ಥನೆ ಮಾಡುವವರು ದೇವರ ಆಶೀರ್ವಾದ ಹೊಂದಲಾರರು.

6. ಸ್ವಂತ ಗಂಡರ ಮೇಲೆ ಪ್ರೀತಿ ಇಲ್ಲದೆ, ಕಳ್ಳಪುರುಷರ ಮೇಲೆ ಪ್ರೀತಿಯಾಗಿರುವ ಸ್ತ್ರೀಯರು ಜಾರರೇ ಹೊರ್ತು ಪತಿವ್ರತೆಗಳಲ್ಲ. ಅದೇ ಪ್ರಕಾರ ಮಹೋನ್ನತನಾದ ದೇವರ ಮೇಲೆ ಭಕ್ತಿ ಇಲ್ಲದೆ, ಲೋಕದ ಸುಖಭೋಗಗಳನ್ನು ಪೇಕ್ಷಿಸುವವರು ಜಾರರಿಗೆ ಸಮಾನವಾದ ವೇಷಧಾರಿಗಳೇ ಹೊರ್ತು ನಿಜ ಭಕ್ತರಲ್ಲ. (ಯೆಶಾ. ೫೭. ೩. ಮತ್ತಾ. ೧೨. ೩೯.) ಲೋಕದ ಸ್ನೇಹವು ವಾಸ ಮಾಡುವ ಮನಸ್ಸಿನಲ್ಲಿ ದೇವರ ಸ್ನೇಹವು ಇರಲಾರದು.

7. ದೇವರಿಗೆ ಹಗೆಯಾದ ಲೋಕವನ್ನು ಸ್ನೇಹಿಸ ಬೇಕೆಂದು ಮನಸ್ಸಾರ ಅಪೇಕ್ಷಿಸುವವನು ಲೋಕದ ಸ್ನೇಹದಿಂದ ದೇವರಿಗೆ ಹಗೆಯವನಾಗಿದ್ದಾನೆಂದು ಪ್ರತ್ಯಕ್ಷವಾಗಿ ತೋರಿಸುತ್ತಾನೆ. (೨ಕೊರಿ. ೬. ೧೪—೧೮. ೨ಪೇತ್ರ. ೨. ೧೮—೨೦. ೧ ಯೋಹಾ. ೨. ೧೫—೧೭.) ಪೌಲ, ಪೇತ್ರ, ಯೋಹಾನ ಎಂಬ ಮೂವರು ಅಪೊಸ್ತಲರು ಬರೆದ ಪತ್ರಿಕೆಗಳಲ್ಲಿ ಈ ಮುಖ್ಯ ವಿಷಯವನ್ನು ಕುರಿತು ಒಂದೇ ಪ್ರಕಾರ ಸಾಕ್ಷಿ ಕೊಟ್ಟಿದ್ದಾರೆ.

8. ಈ ವಚನಕ್ಕೆ ಸರಿಯಾದ ವಚನವು ವೇದದಲ್ಲಿ ಎಲ್ಲಿಯೂ ಇಲ್ಲ. ಆದಾಗ್ಯೂ ಇದರಲ್ಲಿ ಕೆಲವು ವಾಕ್ಯಗಳ ಸಾರವನ್ನು ಕೂಡಿಸಿ ಹೇಳಿರ ಬಹುದು. (ದ್ವಿತೀಯ ನ್ಯಾ. ೧೦. ೧೨—೨೦; ೨೮. ೧೫—೬೮.) ಭಕ್ತರಲ್ಲಿ ವಾಸ ಮಾಡುವ ಪರಿಶುದ್ಧಾತ್ಮನು ಮೇಲೆ ಹೇಳಿದ ವೇದವಾಕ್ಯಗಳ ಸಾರದ ಪ್ರಕಾರ ಹೊಟ್ಟೆಕಿಚ್ಚನ್ನು ಹುಟ್ಟಿಸುತ್ತಾನೋ? ಎಂಬುವದು ಪ್ರಶ್ನೆ. ಅಲ್ಲ, ಆತನು ಹೊಟ್ಟೆಕಿಚ್ಚನ್ನೂ ವಾಗ್ವಾದವನ್ನೂ ಉಂಟು ಮಾಡುವವನಾಗಿರದೆ, ಪ್ರೀತಿಯನ್ನು ಹುಟ್ಟಿಸುವವನಾಗಿದ್ದಾನೆ. ಹೊಟ್ಟೆಕಿಚ್ಚು ಗರ್ವ ಮುಂತಾದ ದುರ್ಗುಣಗಳನ್ನು ತೊಲಗಿಸುವದಕ್ಕೆ ಅಧಿಕ ಕೃಪೆಯನ್ನು ಕೊಡುತ್ತಾನೆಂಬುವದು ಈ ವಾಕ್ಯದ ಅರ್ಥವೆಂದು ಹೇಳ ಬಹುದು.

9. ದೇವರು ಗರ್ವಿಷ್ಠನನ್ನು ತನ್ನ ಶತ್ರುವಾಗಿ ಎಣಿಸಿ, ಅವನನ್ನು ಎದುರಿಸುತ್ತಾನೆ. ಗರ್ವಿಷ್ಠನು ಸಹ ದೇವರನ್ನು ಎದುರಿಸುತ್ತಾನೆಂಧೇಳ ಬಹುದು. ಹೀಗೆ ಸರ್ವಶಕ್ತನಿಗೂ ನೀಚ ಹುಳಕ್ಕೆ ಸಮಾನವಾದ ಗರ್ವಿಷ್ಠನಿಗೂ ನಡಿಯುವ ಯುದ್ಧದಲ್ಲಿ ಬಲಿಷ್ಠನೇ ಜಯಿಸುವನು; ಗರ್ವಿಷ್ಠನು ನಾಶವಾಗುವನೆಂಬುವದಕ್ಕೆ ಸಂದೇಹವಿಲ್ಲ. ದೀನರನ್ನು ದೇವರು ಎಷ್ಟಾಗಿ ಸ್ನೇಹಿಸುತ್ತಾನೋ, ಗರ್ವಿಷ್ಠರನ್ನು ಅಷ್ಟಾಗಿ ಅರೋಚಿಸುತ್ತಾನೆ. ಆದದರಿಂದ ಗರ್ವಿಷ್ಠರಾದ ಪಾಪಿಗಳೇ! ಸರ್ವಶಕ್ತನ ಮುಂದೆ ನಿಮ್ಮನ್ನು ತಗ್ಗಿಸಿ ಕೊಳ್ಳಿರಿ.

೮ [1]ಪಿಶಾಚನನ್ನು ಎದುರಿಸಿರಿ; ಆಗ ನಿಮ್ಮ ಬಳಿಯಿಂದ ಓಡಿ ಹೋಗುವನು. ದೇವರ ಸಮೀಪಕ್ಕೆ ಬನ್ನಿರಿ;
ಆಗ ನಿಮ್ಮ ಸಮೀಪಕ್ಕೆ ಬರುವನು. ಪಾಪಿಷ್ಠರೇ, ಕೈಗಳನ್ನು ಶುಚಿ ಮಾಡಿ ಕೊಳ್ಳಿರಿ. ಎರಡು ಮನಸ್ಸುಳ್ಳ
೯ ವರೇ, ಹೃದಯಗಳನ್ನು ಶುದ್ಧ ಮಾಡಿ ಕೊಳ್ಳಿರಿ. ವ್ಯಥೆ ಪಡಿರಿ, ದುಃಖ ಪಡಿರಿ, ಅಳಿರಿ; ನಿಮ್ಮ ನಗುವು
೧೦ ದುಃಖಕ್ಕೂ, ಸಂತೋಷವು ಕರಕರೆಗೂ, ಬದಲಾಗಲಿ. ಕರ್ತನ ಮುಂದೆ ನಿಮ್ಮನ್ನು ತಗ್ಗಿಸಿ ಕೊಳ್ಳಿರಿ;
ಆಗ ನಿಮ್ಮನ್ನು [2]ಎತ್ತುವನು.

೧೧ ಸಹೋದರರೇ, ಒಬ್ಬರನ್ನೊಬ್ಬರು ನಿಂದಿಸ ಬೇಡಿರಿ. ಸಹೋದರನನ್ನು [3]ನಿಂದಿಸಿ, ಸಹೋದರನಿಗೆ ನ್ಯಾಯ
ತೀರಿಸುವವನು ನ್ಯಾಯಪ್ರಮಾಣವನ್ನು ನಿಂದಿಸಿ, ನ್ಯಾಯಪ್ರಮಾಣಕ್ಕೆ ನ್ಯಾಯ ತೀರಿಸುತ್ತಾನೆ. ಆದರೆ
ನೀನು ನ್ಯಾಯಪ್ರಮಾಣಕ್ಕೆ ನ್ಯಾಯ ತೀರಿಸಿದರೆ, ನ್ಯಾಯಪ್ರಮಾಣವನ್ನು ಮಾಡುವವನಲ್ಲ, ಅದರ ನ್ಯಾ
೧೨ ಯಾಧಿಪತಿಯಾಗಿರುತ್ತೀ. ರಕ್ಷಿಸಲೂ ಕೆಡಿಸಲೂ ಶಕ್ತನಾದ ನ್ಯಾಯಕರ್ತನು [4]ಒಬ್ಬನೇ; ಬೇರೊಬ್ಬನಿಗೆ
ನ್ಯಾಯ ತೀರಿಸುವ ನೀನು ಯಾರು?

ತೃಣೀಕರವೂ ದ್ರವ್ಯಾಶೆಯೂ ಕ್ರೋಧವೂ ಉಳ್ಳವರನ್ನು ಎಚ್ಚರಿಸಿದ್ದು.

೧೩ ಬನ್ನಿರಿ ಈಗ, ಈ ಹೊತ್ತು, ನಾಳೆ, ಇಂಥಿಂಥ ಪಟ್ಟಣಕ್ಕೆ ಹೋಗಿ, ಅಲ್ಲಿ ಒಂದು ವರುಷ ಇದ್ದು, ವ್ಯಾಪಾರ
೧೪ ಮಾಡಿ, ಲಾಭ ಮಾಡಿ ಕೊಳ್ಳೋಣ, ಅಂಬುವವರೇ, [5]ಕೇಳಿರಿ. ನಾಳೆ ಆಗುವಂಥಾದ್ದು ನಿಮಗೆ ತಿಳಿಯದು.
ಯಾಕಂದರೆ ನಿಮ್ಮ ಜೀವವೇನು? ಸ್ವಲ್ಪ ಹೊತ್ತು ಕಾಣಿಸಿ, ಆ ಮೇಲೆ ಕಾಣದೆ ಹೋಗುವ [6]ಹಬೆಯಾಗಿದೆ.
೧೫ ಇದನ್ನು ಬಿಟ್ಟು—ಕರ್ತನ ಚಿತ್ತವಾದರೆ, ನಾವು ಬದುಕಿ, ಇದನ್ನೂ ಅದನ್ನೂ ಮಾಡೇವೆಂದು [7]ಹೇಳ ಬೇ

1. ದೇವರನ್ನು ಎದುರಿಸದೆ, ಪಿಶಾಚನನ್ನು ಎದುರಿಸಿ, ದೇವರು ವಾಗ್ದತ್ತ ಮಾಡಿದ ಕೃಪೆಯನ್ನು ಹೊಂದಿ, (೭. ವ.) ದೇವರಿಗೂ ಮನುಷ್ಯರಿಗೂ ದೊಡ್ಡ ಶತ್ರುವಾದ ಪಿಶಾಚನನ್ನು ಎದುರಿಸಿ ನಿಂತರೆ, ಅವನು ಓಡಿ ಹೋಗುವನು. ಹೀಗೆ ಅವನನ್ನು ಜಯಿಸುವದಕ್ಕೆ ಪ್ರಾರ್ಥನೆಯೇ ಮುಖ್ಯಾಯುಧವಾಗಿರುವದರಿಂದ ಮುಂದಿನ ವಚನದಲ್ಲಿ, ದೇವರ ಸಮೀಪಕ್ಕೆ ಬನ್ನಿರಿ ಎಂದು ಹೇಳಿ ಇದೆ. ಚುರುಕಾದ ಪ್ರಾರ್ಥನೆಯಿಂದ ದೇವರ ಬಳಿಗೆ ಶೇರದವನನ್ನು ಪಿಶಾಚನು ಹಿಡಿದು ಕೊಂಡು, ಅವನ ಬಳಿಯಲ್ಲಿ ತಂಗುವನು. ದೇವರ ಬಳಿಗೆ ಹ್ಯಾಗೆ ಶೇರ ಬೇಕೆಂದು ೯, ೧೦ನೇ ವಚನಗಳಲ್ಲಿ ಹೇಳಿ ಇದೆ. ಪಾಪದಿಂದ ಅಶುಚಿಯಾಗದಂಥ ಶುದ್ಧವಾದ ಕೈಗಳನ್ನು ಎತ್ತಿ, ಕಳಂಕವಿಲ್ಲದ ಮನಸ್ಸಿನಿಂದ, ನಿಜವಾದ ಮಾನಸಾಂತರದಿಂದ ಸತ್ಯದೇವರನ್ನು ಸ್ಮರಿಸಿ ಪ್ರಾರ್ಥಿಸಬೇಕು.

2. ಅತ್ಯಂತ ಭಕ್ತಿವಿನಯದಿಂದ ಸರ್ವಶಕ್ತನಾದ ದೇವರ ಮುಂದೆ ತನ್ನನ್ನು ತಗ್ಗಿಸಿ, ಆತನಿಗೆರಗುವವರಿಗೆ ಆತನು ತನ್ನ ಅಮಿತ ಕೃಪೆಯನ್ನು ಅನುಗ್ರಹಿಸಿ, ಅವರನ್ನು ಪರಮ ಮಹಿಮೆಯಲ್ಲಿ ಹೆಚ್ಚಿಸುವನು.

3. ನಿಂದಿಸುವದು, ಹೊಟ್ಟೆಕಿಚ್ಚಿನಿಂದಲೂ ಭೇದವಾದ ಮನಸ್ಸಿನಿಂದಲೂ ಹುಟ್ಟುವ ದುರ್ಗುಣವೇ. ನ್ಯಾಯಪ್ರಮಾಣಕ್ಕೆ ವಿರೋಧವಲ್ಲದ ಕಾರ್ಯವನ್ನು ಮಾಡುವ ಸಹೋದರನ ಮೇಲೆ ತಪ್ಪು ಹೊರಿಸುವದು, ನ್ಯಾಯಾಧಿಪತಿಯಾಗಿ ನ್ಯಾಯಪ್ರಮಾಣ ಕೊಟ್ಟವನನ್ನು ತಪ್ಪು ನಿರ್ಣಯಿಸುವ ಹಾಗಾಗುತ್ತದೆ. ನಿನ್ನ ಹಾಗೆ ನಿನ್ನ ನೆರೆಯವನನ್ನು ಪ್ರೀತಿ ಮಾಡು ಎಂದು ನ್ಯಾಯಪ್ರಮಾಣವು ಆಜ್ಞಾಪಿಸಲಾಗಿ, ಅನ್ಯಾಯವಾಗಿ ನೆರೆಯವನನ್ನು ದೂಷಿಸುವವನು ನ್ಯಾಯಪ್ರಮಾಣವನ್ನೇ ದೂಷಿಸುತ್ತಾನೆ.

4. ನ್ಯಾಯಪ್ರಮಾಣವನ್ನು ಕೊಟ್ಟವನೂ, ಸರ್ವಲೋಕದ ನ್ಯಾಯಾಧಿಪತಿಯಾಗಿರುವವನೂ, ರಕ್ಷಿಸಲೂ ಶಿಕ್ಷಿಸಲೂ ಶಕ್ತನೂ ಆದ ದೇವರು ಒಬ್ಬನೇ ಇದ್ದಾನೆ. ಆತನ ದಾಸನನ್ನು ನ್ಯಾಯ ತೀರಿಸುವವನು ಆತನ ಮೇಲೆ ಇದ್ದು ನ್ಯಾಯ ತೀರಿಸುವವನ ಹಾಗಿರುವನು. (ರೋಮಾ. ೧೪. ೪.)

5. ಕೇಳಿರಿ, ಎಂಬುವದಕ್ಕೆ ವಿಶೇಷ ಜ್ಞಪ್ತಿ ಇಡಿರಿ ಎಂಬ ಅರ್ಥವು. (೫. ೧.) ತಮ್ಮ ಸ್ವಬುದ್ಧಿಯಿಂದಲೂ ಸಾಮರ್ಥ್ಯದಿಂದಲೂ ದ್ರವ್ಯ ಸಂಪಾದಿಸ ಬಹುದೆಂದು ತೃಣೀಕರವಾಗಿ ನಡೆದವರಿಗೆ ಒಳ್ಳೇ ಪ್ರಸಂಗವಾಗಿದೆ. ಆ ಕಾಲದಲ್ಲಿ ಎಲ್ಲೆಲ್ಲಿಯೂ ಚದರಿ ಇದ್ದ ಇಸ್ರಯೇಲ್ಯರಲ್ಲಿ ಬೇರೆ ಬೇರೆ ಊರುಗಳಿಗೆ ಹೋಗಿ ವ್ಯಾಪಾರ ಮಾಡಿ ದ್ರವ್ಯ ಸಂಪಾದಿಸ ಬಹುದೆಂಬುವ ಗರ್ವವು ಅಧಿಕವಾಗಿರ ಬಹುದು. ಆದದರಿಂದ ಈ ವಚನದಲ್ಲಿ ಅವರ ಸ್ಥಿತಿಗೆ ತಕ್ಕ ಎಚ್ಚರಿಕೆಯು ಉಂಟು.

6. ಮನುಷ್ಯರ ದೇಹಸ್ಥಿತಿಯು ಗುಡಾರಕ್ಕೂ ಹುಲ್ಲಿಗೂ ಹೂವಿಗೂ ಸಮಾನ ಮಾಡಲ್ಪಟ್ಟಿರುವ ಪ್ರಕಾರ ಇಲ್ಲಿ ಹಬೆಗೆ ಸಮಾನ ಮಾಡಲ್ಪಟ್ಟದೆ. ಹಬೆಯ ಹಾಗೆ ಸ್ವಲ್ಪ ಹೊತ್ತಿನಲ್ಲಿ ಕಾಣದೆ ಹೋಗುವ ಅಲ್ಪಾಯುಸ್ಸುಳ್ಳವರು, ಮಾಯಪ್ರಪಂಚದಲ್ಲಿ ಶಾಶ್ವತವಾಗಿದ್ದು ಆಸ್ತಿಯನ್ನು ಸಂಪಾದಿಸ ಬೇಕೆಂದು ನೆನಸುವದು, ಅನೇಕ ವರುಷಗಳಿಗೆ ಆಸ್ತಿಯನ್ನು ಸಂಪಾದಿಸಿ ಇಟ್ಟೆನೆಂದು ಹೆಚ್ಚಳ ಪಟ್ಟು ಅದೇ ರಾತ್ರಿಯಲ್ಲಿ ಪ್ರಾಣ ಕಳಕೊಂಡ ಬುದ್ಧಿಹೀನನ ಕಥೆಗೆ ಸಮಾನವಾಗಿದೆ.

7. ಅಪೊಸ್ತಲನಾದ ಪೌಲನು ಸಹ ಹಾಗೆಯೇ ಹೇಳಿದನು. (೧ ಕೊರಿ. ೪. ೧೯.) ಇದನ್ನು ಒಂದೊಂದು ಸಮಯದಲ್ಲಿಯೂ ಬಾಯಿಂದ ಹೇಳದೆ ಇದ್ದಾಗ್ಯೂ, ಮನಸ್ಸಿನಲ್ಲಿ ಗ್ರಹಿಸಿ ನಡಿಯುವದು ಅವಶ್ಯ.



೧೬ ಕಾಗಿತ್ತು. ಆದರೆ ಈಗ ನಿಮ್ಮ ಡಂಭಗಳಲ್ಲಿ ಹೆಚ್ಚಳ ಪಡುತ್ತೀರಿ; ಅಂಥ ಹೆಚ್ಚಳವೆಲ್ಲಾ [1]ಕೆಟ್ಟದ್ದಾಗಿದೆ.
೧೭ ಹಾಗಾದರೆ ಒಳ್ಳೇದನ್ನು ಮಾಡ ತಿಳಿದು, ಮಾಡದವನಿಗೆ [2]ಪಾಪ ಉಂಟು.

5. [3]ಬನ್ನಿರಿ ಈಗ, [4]ಐಶ್ವರ್ಯವಂತರೇ, ನಿಮ್ಮ ಮೇಲೆ ಬರುವ ವ್ಯಥೆಗಳಿಗೋಸ್ಕರ ಅತ್ತು, ಗೋಳಾಡಿರಿ.
೨, ೩ ನಿಮ್ಮ ಐಶ್ವರ್ಯವು ಕೆಟ್ಟು ಹೋಯಿತು; ನಿಮ್ಮ ವಸ್ತ್ರಗಳು ನುಸಿ ಹತ್ತಿ ಹೋದವು; ನಿಮ್ಮ ಚಿನ್ನವೂ
ಬೆಳ್ಳಿಯೂ [5]ತುಕ್ಕು ಹಿಡಿದು ಹೋದವು. ಅವುಗಳ ತುಕ್ಕು ನಿಮಗೆ ಸಾಕ್ಷಿಯಾಗಿದ್ದು, ನಿಮ್ಮ ಮಾಂಸವನ್ನು
೪ ಬೆಂಕಿಯ ಹಾಗೆ ತಿನ್ನುವದು. ಕಡೇ ದಿವಸಗಳಿಗೆ ದ್ರವ್ಯಗಳನ್ನು ಇಟ್ಟು ಕೊಂಡಿದ್ದೀರಿ. ಇಗೋ, ನಿಮ್ಮ
ಹೊಲಗಳ ಪೈರನ್ನು ಕೊಯಿದ ಕೆಲಸದವರಿಂದ ನೀವು ಮೋಸವಾಗಿ ಹಿಡಿದ ಕೂಲಿಯು ಕೂಗುತ್ತದೆ.
೫ ಮತ್ತು ಪೈರನ್ನು ಕೊಯಿದವರ ಮೊರೆಗಳು [6]ಸೈನ್ಯಗಳ ಕರ್ತನ ಕಿವಿಗಳಲ್ಲಿ ಪ್ರವೇಶಿಸಿದವು. ಭೂಮಿಯ
ಮೇಲೆ ಸೌಖ್ಯವೂ ಭೋಗವೂ ಉಳ್ಳವರಾಗಿ, ಕೊಲೆಯ ದಿವಸವಾಯಿತೆಂದು, ನಿಮ್ಮ [7]ಹೃದಯಗಳನ್ನು
೬ ಪೋಷಿಸಿದ್ದೀರಿ. ನೀತಿವಂತನಿಗೆ ಆಜ್ಞೆ ನಿರ್ಣಯಿಸಿ, ಕೊಂದು ಹಾಕಿದ್ದೀರಿ; ಅವನು [8]ನಿಮ್ಮನ್ನು ಎದುರಿಸುವದಿಲ್ಲ.

ಉಪದ್ರ ಪಡುವವರನ್ನು ಉತ್ಸಾಹ ಪಡಿಸಿದ್ದು; ನಾನಾ ತರದ ಸ್ಥಿತಿಯುಳ್ಳವರಿಗೆ ಬುದ್ಧಿ ಹೇಳಿದ್ದು.

೭ ಹಾಗಾದರೆ, ಸಹೋದರರೇ, ಕರ್ತನ ಬರುವಿಕೆಯ ಪರ್ಯಂತರ ತಾಳಿ ಕೊಳ್ಳಿರಿ. ಇಗೋ, ಒಕ್ಕಲಿಗನು

1. ಇಂಥಾ ಹೆಚ್ಚಳವು ದೇವರನ್ನು ಮರೆತು ಬಿಡುವದರಿಂದಲೇ ಹುಟ್ಟುವ ದುರ್ಗುಣವಾದದರಿಂದ ಇದು ಕೆಟ್ಟದ್ದಾಗಿದೆ.

2. ಈ ವಿಷಯದಲ್ಲಿಯೂ ಬೇರೆ ಎಲ್ಲಾ ವಿಷಯಗಳಲ್ಲಿಯೂ ಒಳ್ಳೇದನ್ನು ಮಾಡ ತಕ್ಕ ಶಕ್ತಿಯೂ ಸಮಯವೂ ಉಳ್ಳ ಮನುಷ್ಯನು ಅದನ್ನು ಮಾಡದೆ ಇದ್ದರೆ, ಅವನು ಕೇಡು ಮಾಡುವವನಾಗಿಯೂ ಪಾಪವನ್ನು ಹೆಚ್ಚಿಸುವವನಾಗಿಯೂ ಇರುವನು. (ಲೂಕ. ೧೨. ೪೭.) ಕೇಡು ಮಾಡುವದು ಪಾಪವಾಗಿರುವ ಪ್ರಕಾರ, ಮೇಲು ಮಾಡದೆ ಇರುವದು ಸಹ ಪಾಪವೇ.

3. ಈ ಸಂಧಿಯಲ್ಲಿ ಭಕ್ತರಾದ ಬಡವರನ್ನು ಕಷ್ಟ ಪಡಿಸುವ ಐಶ್ವರ್ಯವಂತರಿಗೆ ದಂಡನೆ ಬರುವದೆಂದೂ, (೧—೬. ವ.) ಉಪದ್ರ ಪಡುವ ಬಡ ಕ್ರೈಸ್ತರು ಕರ್ತನ ಬರುವಿಕೆಯನ್ನು ಆಶೆಯಿಂದ ನಿರೀಕ್ಷಿಸುವವರಾಗಿ, ಎಲ್ಲಾ ಉಪದ್ರಗಳನ್ನೂ ತಾಳ್ಮೆಯಿಂದ ಸಹಿಸ ಬೇಕೆಂದೂ, (೭, ೮. ವ.) ಯೋಬನ ತಾಳ್ಮೆಯನ್ನೂ ಅದರಿಂದ ಅವನಿಗುಂಟಾದ ಅನುಕೂಲವನ್ನೂ ನೆನಸಿ, ಐಶ್ವರ್ಯವಂತರ ಮೇಲೆ ಹೊಟ್ಟೆಕಿಚ್ಚು ಪಡ ಬಾರದೆಂದೂ, (೯—೧೧. ವ.) ಹೇಳಿ, ಆಣೆ ಇಡುವದು, (೧೨. ವ.) ಸುಖ ದುಃಖಗಳಲ್ಲಿ ದೇವರ ಚಿತ್ತಕ್ಕೆ ಒಳ ಪಟ್ಟು ಭಕ್ತಿಯಾಗಿ ನಡಿಯುವದು, (೧೩. ವ.) ವಾತಿ ಮಾಡುವ ವರವನ್ನು ಪ್ರಯೋಗಿಸುವದು, (೧೪, ೧೫. ವ.) ಒಬ್ಬರಿಗೊಬ್ಬರು ಪಾಪಗಳನ್ನು ಅರಿಕೆ ಮಾಡುವದು, ಒಬ್ಬರಿಗೋಸ್ಕರ ಒಬ್ಬರು ಪ್ರಾರ್ಥಿಸುವದು, (೧೬—೧೮. ವ.) ಮಾರ್ಗ ತಪ್ಪಿ ನಡಿಯುವವರನ್ನು ಮಾರ್ಗಕ್ಕೆ ತಿರುಗಿಸುವದು (೧೯, ೨೦. ವ.) ಮುಂತಾದ ವಿಷಯಗಳನ್ನು ಕುರಿತು ಕೆಲವು ಕಟ್ಟಳೆಗಳು ಹೇಳಲ್ಪಟ್ಟವೆ.

4. ಐಶ್ವರ್ಯವಂತರು ಎಂಬುವದು ಲೋಕದ ಬದುಕು ನಿತ್ಯವೆಂದೆಣಿಸಿ, (ಲೂಕ. ೬. ೨೪.) ಗರ್ವದಿಂದ ಬಡವರನ್ನು ಕಷ್ಟ ಪಡಿಸುವ ಧನವಂತರನ್ನು ಕುರಿತದ್ದು. (೪—೬. ವ.) ಇಂಥವರಿಗೆ ನಾಶ ಬರುವದೆಂದು ಈ ವಚನದಿಂದ ತಿಳಿಯ ಬಹುದು.

5. ಲೌಕಿಕ ಐಶ್ವರ್ಯವು ನೆಲೆಯಾಗಿರದೆ ನಾಶವಾಗುವದೆಂಬುವದು ಪ್ರತ್ಯಕ್ಷವಾಗಿದೆ. ಬಡವರನ್ನು ಕಷ್ಟ ಪಡಿಸಿ, ಅನ್ಯಾಯವಾಗಿ ಸಂಪಾದಿಸಿ, ಒಬ್ಬರಿಗೂ ಕೊಡದೆ, ಬಚ್ಚಿಟ್ಟ ದ್ರವ್ಯವು ನೆಲೆಯಾಗಿರದು. ಅದು ನುಸಿಯಿಂದಲೂ ತುಕ್ಕಿನಿಂದಲೂ ಕೆಟ್ಟು ಹೋಗುವದು. ಅದರ ತುಕ್ಕೂ ನುಸಿಯೂ ಕಡೇ ದಿನದಲ್ಲಿ ಅವರ ಕ್ರೂರತ್ವಕ್ಕೂ ದ್ರವ್ಯಾಶೆಗೂ ಸಾಕ್ಷಿಯಾಗಿ ಏಳುವದು. (೭, ೮. ವ. ಲೂಕ. ೧೭. ೨೬—೩೦.)

6. ಸೈನ್ಯಗಳ ಕರ್ತನಾದ ದೇವರು ಪರಲೋಕದಲ್ಲಿದ್ದು ಸಕಲವನ್ನು ದೃಷ್ಟಿಸಿ ನೋಡುತ್ತಾನೆ. ಐಶ್ವರ್ಯವಂತರಿಂದ ಕಷ್ಟನಷ್ಟಗಳನ್ನು ಹೊಂದುವ ಬಡವರ ಮೊರೆಯು ಆತನ ಕಿವಿಯಲ್ಲಿ ಬೀಳುವದರಿಂದ, ಆತನು ಪರಮ ಸೈನ್ಯಗಳೊಡನೆ ಲೋಕವನ್ನು ನ್ಯಾಯ ತೀರಿಸ ಬರುವ ದಿವಸದಲ್ಲಿ ಬಡವರನ್ನು ಕುಂದಿಸಿದ ಐಶ್ವರ್ಯವಂತರಿಗೆ ಕಠಿಣ ದಂಡನೆ ಸಂಭವಿಸುವದು.

7. ಹೃದಯಗಳು ಅಂದರೆ, ಸ್ವಾಭಾವಿಕ ಆಶೆ ಇಚ್ಛೆಗಳು, (ಲೂಕ. ೨೧. ೩೪. ಅಪೊ. ಕ್ರಿ. ೧೪. ೧೭.) ಹೊಡಿಯಲಿಕ್ಕಿರುವ ಮೃಗಗಳನ್ನು ಕೊಬ್ಬಿಸುವ ಪ್ರಕಾರ ಈ ಧನವಂತರು ಸುಖಭೋಗಗಳಲ್ಲಿ ಮಗ್ನರಾಗಿ, ನರಕದ ನಿತ್ಯ ನಾಶನಕ್ಕೆ ತಮ್ಮನ್ನು ಕೊಬ್ಬಿಸಿ ಕೊಳ್ಳುತ್ತಾರೆ.

8. ನೀತಿಕರ್ತನಾದ ಯೇಸುವಿನ ಪ್ರಕಾರ ಆತನ ದಾಸರು ಸಹ ದುರ್ಮಾರ್ಗರನ್ನು ಎದುರಿಸಿ ನಿಲ್ಲದೆ, ಮಹಾ ಶಾಂತವಾಗಿ ದೀನತ್ವದಿಂದ ನಡೆದರು. ಸ್ತೆಫನನು ಹಾಗೆಯೇ ಮಾಡಿದನು. ಈ ಪತ್ರಿಕೆಯನ್ನು ಬರೆದ ಯಾಕೋಬನು ಸಹ ಅದೇ ಪ್ರಕಾರ ತನಗೆ ಬಂದ ಉಪದ್ರವನ್ನು ತಾಳ್ಮೆಯಿಂದ ಸಹಿಸಿ ಕೊಂಡನು. ಶತ್ರುಗಳು ಅವನನ್ನು ಯೆರೂಸಲೇಮಿನ ದೇವಾಲಯದ ಕುಂಭಿಯಿಂದ ತಲೆ ಕೆಳಗಾಗಿ ದೊಬ್ಬಿ, ಒಂದು ಟೊಣಪೆಯಿಂದ ಹೊಡೆದು ಕೊಂದರೆಂದು ಸಭೆಯ ಚರಿತ್ರೆಯಲ್ಲಿ ಹೇಳಿ ಇದೆ.

ಮುಂಗಾರೆ [1]ಹಿಂಗಾರೆ ಹೊಂದುವ ಪರ್ಯಂತರ ತಾಳಿ ಕೊಂಡು, ಭೂಮಿಯ ಪ್ರಿಯವಾದ ಫಲಕ್ಕೋಸ್ಕರ
೮ ಕಾದು ಕೊಂಡಿರುವನು. ನೀವು ಸಹ ತಾಳಿ ಕೊಂಡು, ನಿಮ್ಮ ಹೃದಯಗಳನ್ನು ದೃಢ ಪಡಿಸಿರಿ; ಯಾ
ಕಂದರೆ [2]ಕರ್ತನ ಬರುವಿಕೆಯು ಸಮೀಪವಾಗಿದೆ.
೯ ಸಹೋದರರೇ, ನೀವು ಆಜ್ಞೆನಿರ್ಣಯ ಪಡದ ಹಾಗೆ, [3]ಒಬ್ಬರ ಮೇಲೊಬ್ಬರು ಗುಣುಗುಟ್ಟ ಬೇಡಿರಿ.
೧೦ ಇಗೋ, ನ್ಯಾಯಾಧಿಪತಿಯು [4]ಕದಗಳ ಮುಂದೆ ನಿಂತಿದ್ದಾನೆ. ನನ್ನ ಸಹೋದರರೇ, ಕರ್ತನ ಹೆಸರಿನಲ್ಲಿ
೧೧ ಮಾತಾಡಿದ [5]ಪ್ರವಾದಿಗಳನ್ನು ಶ್ರಮೆ ತಾಳ್ಮೆ ದೀರ್ಘಶಾಂತಿಗಳ ಮಾದರಿಯಾಗಿ ತಕ್ಕೊಳ್ಳಿರಿ. ಇಗೋ,
ತಾಳಿ ಕೊಳ್ಳುವವರು ಭಾಗ್ಯವಂತರೆಂದು ಹೇಳುತ್ತೇವೆ; [6]ಯೋಬನ ತಾಳ್ಮೆಯನ್ನು ಕೇಳಿದ್ಧೀರಿ; ಮತ್ತು
ಕರ್ತನ ಅಂತ್ಯವನ್ನು ನೋಡಿದ್ಧೀರಿ; ಏನಂದರೆ ಕರ್ತನು ಬಹು ಅಂತಃಕರಣವೂ ಕನಿಕರವೂ ಉಳ್ಳವನಾಗಿ
ದ್ದಾನೆ.
೧೨ ಆದರೆ ಎಲ್ಲಾದರ ಮೊದಲು, ನನ್ನ ಸಹೋದರರೇ, ಆಣೆ ಇಡ ಬೇಡಿರಿ. ಆಕಾಶದ ಮೇಲಾಗಲಿ, ಭೂ
ಮಿಯ ಮೇಲಾಗಲಿ, ಬೇರೆ ಯಾವ [7]ಆಣೆಯಾಗಲಿ, ಬೇಡ. ನೀವು ಆಜ್ಞೆಗೊಳಗಾಗದ ಹಾಗೆ, ನೀವು
ಹೌದಂದರೆ, ಹೌದಾಗಲಿ; ಅಲ್ಲವಂದರೆ, ಅಲ್ಲವಾಗಲಿ.
೧೩ ನಿಮ್ಮಲ್ಲಿ ಒಬ್ಬನು ಶ್ರಮೆ ಪಡುತ್ತಾನೋ? ಪ್ರಾರ್ಥಿಸಲಿ. ಒಬ್ಬನು [8]ಸುಖವಾಗಿದ್ದಾನೋ? ಕೀರ್ತನೆ ಹಾಡಲಿ.
೧೪ ನಿಮ್ಮಲ್ಲಿ ಒಬ್ಬನು ರೋಗಿಷ್ಠನಾಗಿದ್ಧಾನೋ? ಸಭೆಯ ಹಿರಿಯರನ್ನು ಕರೇ ಕಳುಹಿಸಲಿ. ಅವರು ಕರ್ತನ

1. ಭಕ್ತರನ್ನು ಉಪದ್ರ ಪಡಿಸಿದ ದುಷ್ಟರಿಗೆ ಮುಯ್ಯಿ ಕೊಡುವದಕ್ಕೆ ಬರುವ ಕರ್ತನ ಪ್ರಸನ್ನತೆಯನ್ನು ಆಶೆಯಿಂದ ಎದುರು ನೋಡುತ್ತಾ ತಾಳ್ಮೆಯಾಗಿರುವದಕ್ಕೆ ಒಕ್ಕಲಿಗನ ಉಪಮಾನ ಹೇಳಿ ಇದೆ. ಬೇಸಿಗೆಯ ತರುವಾಯ ಮುಂಗಾರೆ ಮಳೆ ಸುರಿಯುವಾಗ ಹೊಲವನ್ನು ಉತ್ತು ಬಿತ್ತುವದೂ, ಹಿಂಗಾರೆ ಮಳೆ ಸುರಿದು ಪೈರು ಬೆಳೆದು ಪಕ್ವವಾಗುವ ಮಟ್ಟಿಗೂ ತಾಳ್ಮೆಯಿಂದ ಕಾದಿದ್ದು ಕೊಯ್ಯುವದೂ ಸಂಸಾರಿಗಳಿಗೆ ವಾಡಿಕೆಯಾಗಿದೆ. ಹಾಗೆಯೇ ನಿತ್ಯಜೀವದ ಆತ್ಮಿಕ ಬೆಳೆಯ ಕೊಯ್ಯುವಿಕೆಯನ್ನು ಕಾದಿರುವ ಭಕ್ತರು ತಾಳ್ಮೆಯುಳ್ಳವರಾಗಿರ ಬೇಕು.

2. ಕರ್ತನು ಬರುವಾಗ, ಭೂಮಿಯ ಪೈರು ಒಣಗಿ ಇದೆ; ಕೊಯ್ಯುವ ಕಾಲ ಬಂತು; ಆದದರಿಂದ ನಿನ್ನ ಕುಡುಗೋಲನ್ನು ಚಾಚಿ ಕೊಯಿದು ಬಿಡು, ಎಂದು ಒಂದು ದೊಡ್ಡ ಶಬ್ದ ಉಂಟಾಗುವದು. (ಪ್ರಕಟ. ೧೪. ೧೫.) ಉಪದ್ರ ಪಡುವ ಭಕ್ತರೇ! ನೀವು ಇಂಥಾ ಒಳ್ಳೇ ಕಾಲವನ್ನು ನೆನಸಿ, ವಿಶ್ವಾಸ ನಂಬಿಕೆ ಪ್ರೀತಿ ಎಂಬ ಸದ್ಗುಣಗಳು ಬೆಳೆಯ ತಕ್ಕ ನಿಮ್ಮ ಹೃದಯಗಳನ್ನು ದೃಢ ಪಡಿಸಿರಿ.

3. ಬಹಳ ಉಪದ್ರ ಪಡುವವರು ಮೊರೆ ಇಡಲೂ ಗುಣುಗುಟ್ಟಲೂ ಹೇತುವೆಯಾಗುವದು. ಗುಣುಗುಟ್ಟುವವರಿಗೆ ಆಜ್ಞೆನಿರ್ಣಯವಾಗುವದು. ಆದದರಿಂದ ಗುಣುಗುಟ್ಟದೆ ತಾಳ್ಮೆಯಿಂದ ಸಹಿಸ ಬೇಕು.

4. ಸರ್ವಲೋಕಕ್ಕೆ ನ್ಯಾಯ ತೀರಿಸುವ ಕರ್ತನು ಸಮೀಪವಾಗಿ ಬಾಗಲ ಮುಂದೆ ನಿಂತಿದ್ದಾನೆ. (೮. ವ. ಮತ್ತಾ. ೨೪. ೩೩. ಲೂಕ. ೧೨. ೩೬.) ಆತನು ಆ ಮಹಾ ದಿವಸದಲ್ಲಿ ಅವರವರ ಕ್ರಿಯೆಗಳಿಗೆ ತಕ್ಕ ಫಲವನ್ನು ಕೊಟ್ಟು ಸಕಲವನ್ನೂ ನೆಟ್ಟಗೆ ಮಾಡುವನು. ಆದದರಿಂದ ಆತನ ಬರುವಿಕೆಗೆ ತಾಳ್ಮೆಯಿಂದ ಕಾದು ಕೊಂಡಿರ ಬೇಕು.

5. (ಮತ್ತಾ. ೫. ೧೨. ಇಬ್ರೀ. ೧೧. ೩೫—೩೮.) ಪ್ರವಾದಿಗಳು ಮುಂತಾದ ಭಕ್ತರೆಲ್ಲರೂ ಉಪದ್ರವೆಂಬ ಇಕ್ಕಟ್ಟಿನ ಬಾಗಲ ಮಾರ್ಗವಾಗಿ ನಡೆದು, ಪರಮ ಪದವಿ ಹೊಂದಿರುವದರಿಂದ, ಕ್ರಿಸ್ತನ ಭಕ್ತರು ಅವರಿಗಿಂತ ತಮಗೆ ಹೆಚ್ಚಾದದ್ದು ಸಂಭವಿಸಿತೆಂದು ನೆನಸದೆ ತಾಳ್ಮೆಯಿಂದಿರ ಬೇಕು.

6. ಉಪದ್ರವನ್ನು ತಾಳ್ಮೆಯಿಂದ ಸಹಿಸುವದಕ್ಕೂ ಅದರ ಫಲಕ್ಕೂ ಯೋಬನ ದೃಷ್ಟಾಂತ ಹೇಳಿ ಇದೆ. ಅವನಿಗೆ ಸಂಭವಿಸಿದ ಅಘೋರ ಕಷ್ಟದಿಂದ ಅವನ ಮನಸ್ಸು ದಣಿದು ಹೋಗ ತಕ್ಕದ್ದಾಗಿದ್ದರೂ, ಅವನು ಕಡೇ ಮಟ್ಟಿಗೂ ಕರ್ತನನ್ನು ದೃಢವಾಗಿ ನಂಬಿದನು. ಅದರಿಂದ ದೇವರ ಕೃಪಾದೃಷ್ಟಿಯುಳ್ಳ ಗುರಿಯು ಪ್ರಕಟವಾಯಿತು. ಅವನು ಎಷ್ಟು ಕಷ್ಟವನ್ನು ಸಹಿಸಿದನೋ ಅಷ್ಟು ಸಂತೋಷವನ್ನು ಕಡೆಯಲ್ಲಿ ಹೊಂದಿದನು.

7. (ಮತ್ತಾ. ೫. ೩೩, ೩೭. ವಚನಗಳ ವ್ಯಾಖ್ಯಾನ ನೋಡ ಬೇಕು.) ಅವಶ್ಯವಾದ ಸಮಯಗಳಲ್ಲಿ ದೇವರ ಪರಿಶುದ್ಧ ಹೆಸರಿನಿಂದ ಪ್ರಮಾಣ ಮಾಡುವದು ದೋಷವಲ್ಲವೆಂದು ಸತ್ಯವೇದದಿಂದ ತಿಳಿಯ ಬಹುದು. (ದ್ವಿತೀಯ ನ್ಯಾ. ೬. ೧೩. ೨ ಕೊರಿ. ೧. ೨೩. ಇಬ್ರೀ. ೬. ೧೬. ಅಜ್ಞಾನರ ಹಾಗೆ ಸುಳ್ಳನ್ನು ಸ್ಥಾಪಿಸುವದಕ್ಕೆ ಆಣೆ ಇಡ ಬಾರದು. ಯಾವ ಸೃಷ್ಟಿಯ ಮೇಲಾದರೂ ಆಣೆ ಇಡುವದು ಅಯೋಗ್ಯವಾದದ್ದೂ ಭಕ್ತಿಹೀನವಾದದ್ದೂ ಆಗಿದೆ. ಅಂಥಾ ಆಣೆ ಇಡ ಬಾರದೆಂದು ಕರ್ತನು ಪರ್ವತ ಪ್ರಸಂಗದಲ್ಲಿಯೂ, ಯಾಕೋಬನು ಈ ಪತ್ರಿಕೆಯಲ್ಲಿಯೂ ಹೇಳಿದ್ದಾರೆಂದು ತಿಳಿಯ ಬೇಕು. ಕರ್ತನ ಪರಿಶುದ್ಧ ಹೆಸರನ್ನು ಅವಶ್ಯವಿಲ್ಲದೆ ವ್ಯರ್ಥವಾಗಿ ಎತ್ತುವವರು ದಂಡನೆ ಹೊಂದುವರು.

8. ಕ್ರಿಸ್ತನ ಭಕ್ತರು ಶ್ರಮೆಯನ್ನೂ ಸುಖವನ್ನೂ, ದೇವರ ಹೆಸರನ್ನು ಮಹಿಮೆ ಪಡಿಸುವದಕ್ಕಾಗಿ ಆತನ ಚಿತ್ತಕ್ಕೆ ತಕ್ಕ ಪ್ರಕಾರ ಅನುಭವಿಸ ಬೇಕು. (ಎಫೆ. ೫. ೧೯, ೨೦.) ಆಗ ಕರ್ತನು ಸುಖದಲ್ಲಿಯೂ ದುಃಖದಲ್ಲಿಯೂ ಅವರ ಸಂಗಡ ಇದ್ದು ಅವರನ್ನು ಆಶೀರ್ವದಿಸುವನು.



೧೫ ಹೆಸರಿನಲ್ಲಿ ಅವನಿಗೆ [1]ಎಣ್ಣೆ ಹಚ್ಚಿ, ಅವನಿಗೋಸ್ಕರ ಪ್ರಾರ್ಥನೆ ಮಾಡಲಿ. ಆಗ [2]ವಿಶ್ವಾಸದ ಪ್ರಾರ್ಥನೆಯು
ರೋಗಿಷ್ಠನನ್ನು ರಕ್ಷಿಸುವದು. ಮತ್ತು ಕರ್ತನು ಅವನನ್ನು ಎಬ್ಬಿಸುವನು. ಅವನು ಪಾಪಗಳನ್ನು ಮಾಡಿ
ದವನಾದರೆ, ಅವನಿಗೆ ಮನ್ನಿಸಲ್ಪಡುವವು.
೧೬ ವಾಸಿಯಾಗುವ ಹಾಗೆ, ನೀವು [3]ಒಬ್ಬರಿಗೊಬ್ಬರು ಪಾಪಗಳನ್ನು ಅರಿಕೆ ಮಾಡಿ, ಒಬ್ಬರಿಗೋಸ್ಕರ ಒಬ್ಬರು
೧೭ ಪ್ರಾರ್ಥನೆ ಮಾಡಿರಿ. ನೀತಿವಂತನ ಚುರುಕಾದ ಪ್ರಾರ್ಥನೆಯು ಬಹು ಶಕ್ತಿಯುಳ್ಳದ್ದಾಗಿದೆ. ಎಲೀಯನು
ನಮಗೆ ಸಮಾನವಾದ ಸ್ವಭಾವವುಳ್ಳ ಮನುಷ್ಯನಾಗಿದ್ದನು; ಅವನು ಮಳೆ ಬೀಳದ ಹಾಗೆ [4]ಪ್ರಾರ್ಥನೆ ಮಾ
೧೮ ಡಲಾಗಿ, ಮೂರು ವರುಷ ಆರು ತಿಂಗಳು [5]ಭೂಮಿಯ ಮೇಲೆ ಮಳೆ ಬೀಳಲಿಲ್ಲ. ಅವನು ತಿರಿಗಿ ಪ್ರಾರ್ಥಿ
ಸಲಾಗಿ, ಆಕಾಶವು ಮಳೆಯನ್ನು ಕೊಟ್ಟಿತು; ಭೂಮಿಯು ತನ್ನ ಫಲವನ್ನು ಫಲಿಸಿತು.
೧೯ ಸಹೋದರರೇ, ನಿಮ್ಮಲ್ಲಿ ಒಬ್ಬನು ಸತ್ಯ ಬಿಟ್ಟು ತಪ್ಪಿ ಹೋಗಲಾಗಿ, ಮತ್ತೊಬ್ಬನು ಅವನನ್ನು [6]ತಿರುಗಿಸಿದರೆ,
೨೦ ಪಾಪಿಷ್ಠನನ್ನು ಅವನ ತಪ್ಪಾದ ಮಾರ್ಗದಿಂದ ತಿರುಗಿಸಿದವನು ಅವನ ಪ್ರಾಣವನ್ನು [7]ಮರಣದಿಂದ ರಕ್ಷಿಸಿ,
ಪಾಪಗಳ ಸಮೂಹವನ್ನು ಅಡಗಿಸುವನೆಂದು, ತಿಳಿದಿರಲಿ.

1. (ಮಾರ್ಕ. ೬. ೧೩. ವಚನದ ವ್ಯಾಖ್ಯಾನ ನೋಡ ಬೇಕು.) ರೋಗಿಷ್ಠರನ್ನು ಗುಣ ಮಾಡುವ ವರಕ್ಕೆ ಎಣ್ಣೆ ಹಚ್ಚುವದು ಗುರುತಾಗಿದೆ.

2. ಎಣ್ಣೆ ಹಚ್ಚುವದರ ಕೂಡ ವಿಶ್ವಾಸದ ಪ್ರಾರ್ಥನೆಯು ಶೇರಿರ ಬೇಕು. ದೇವರ ವಾಗ್ದತ್ತವನ್ನು ನಂಬಿ ಮಾಡುವ ಪ್ರಾರ್ಥನೆಯು (೧. ೬.) ರೋಗಿಷ್ಠನನ್ನು ಸ್ವಸ್ಥ ಮಾಡುವದಕ್ಕೆ ತಕ್ಕ ಯತ್ನವಾಗಿರುತ್ತದೆ. (೧ ಕೊರಿ. ೧೨. ೯.) ಆ ರೋಗವು ಅವನು ಮಾಡಿದ ಪಾಪದಿಂದ ಸಂಭವಿಸಿದ್ದಾದರೆ, (೧ ಕೊರಿ. ೧೧. ೩೦.) ಅವನಿಗೆ ಪಾಪಕ್ಷಮೆಯಾಗುವದಕ್ಕೆ ತಕ್ಕ ಯತ್ನವಾಗಿಯೂ ಇರುವದು. ಈ ಕಾಲದಲ್ಲಿ ಸಭೆಯಲ್ಲಿ ಅದ್ಭುತವರಗಳಿಲ್ಲದ್ದರಿಂದ ಎಣ್ಣೆ ಹಚ್ಚುವದು ಮುಂತಾದ ಗುರುತುಗಳು ಅವಶ್ಯವಿಲ್ಲ. ಆದಾಗ್ಯೂ ಈ ಕಟ್ಟಳೆಯನ್ನನುಸರಿಸಿ ಭಕ್ತರು ಕೂಡಿ ಮಾಡುವ ಚುರುಕಾದ ಪ್ರಾರ್ಥನೆಯಿಂದ ಅನೇಕ ರೋಗಿಷ್ಠರು ಸ್ವಸ್ಥ ಹೊಂದಿದ್ದಾರೆ. ರೋಮನ್ ಮತಸ್ಥರು ಮಾಡುವ ಅವಸಾನಭ್ಯಾಂಗವೆಂಬ ಆಚರಣೆಗೆ ಇದರಲ್ಲಿ ಏನೂ ಆಧಾರವಿಲ್ಲ. ಪ್ರಾಣ ಹೋಗುವ ಸಮಯದಲ್ಲಿ ಎಣ್ಣೆ ಹಚ್ಚುವದರಿಂದ ಏನೂ ಪ್ರಯೋಜನವಾಗಲಾರದು.

3. ಪಾಪಗಳನ್ನು ಸಭೆಯವರಿಗೆ ಮಾತ್ರವಲ್ಲ, (೧೪. ವ.) ಪ್ರಾರ್ಥನೆಯ ವಾಂಛೆಯೂ ಪರಿಶುದ್ಧ ನಡತೆಯೂ ಉಳ್ಳ ಕ್ರೈಸ್ತ ಸಹೋದರರಿಗೂ ಅರಿಕೆ ಮಾಡ ಬಹುದು. ಆದದರಿಂದ ಗುರುಗಳ ಬಳಿಯಲ್ಲಿ ಪಾಪಸಂಕೀರ್ತನೆ ಮಾಡ ಬೇಕೆಂದು ಹೇಳುವ ರೋಮನ್ ಸಭೆಯವರ ಕಟ್ಟಳೆಗೆ ಇದರಲ್ಲಿ ಏನೂ ಆಸ್ಪದವಿಲ್ಲ. ನೀವು ಒಬ್ಬರಿಗೊಬ್ಬರು ಪಾಪಗಳನ್ನು ಅರಿಕೆ ಮಾಡಿ, ಒಬ್ಬರಿಗೋಸ್ಕರ ಒಬ್ಬರು ಪ್ರಾರ್ಥಿಸಿರಿ ಎಂದು ಹೇಳಿರುವದರಿಂದ, ಸಭೆಯವರು ಗುರುಗಳಿಗೆ ತಮ್ಮ ಪಾಪಗಳನ್ನು ಅರಿಕೆ ಮಾಡ ಬೇಕೆಂದು ಸಾಧಿಸುವದು ನ್ಯಾಯವಾದರೆ, ಗುರುಗಳು ತಮ್ಮ ಪಾಪಗಳನ್ನು ಸಭೆಯವರಿಗೆ ಅರಿಕೆ ಮಾಡ ತಕ್ಕದ್ದು ಸಹ ನ್ಯಾಯವಾಗಿದೆ. ನೀತಿವಂತನ ಚುರುಕಾದ ಪ್ರಾರ್ಥನೆಯು ಬಹು ಶಕ್ತಿಯುಳ್ಳದ್ದೆಂದು ಹೇಳಿರುವದೇ ಹೊರ್ತು, ಗುರುಗಳ ಪ್ರಾರ್ಥನೆ ಮಾತ್ರ ಶಕ್ತಿಯುಳ್ಳದ್ದೆಂದು ಹೇಳಿರುವದಿಲ್ಲ.

4. ೧ ಅರ. ೧೭ನೇ ೧೮ನೇ ಸಂಧಿಗಳಲ್ಲಿ ಅಡಗಿರುವ ಚರಿತ್ರೆಯಲ್ಲಿ ಕಾನಾನ್ ದೇಶದಲ್ಲಿ ಸಂಭವಿಸಿದ ಕಠಿಣ ಬರದ ಪ್ರಾರಂಭದಲ್ಲಿಯೂ ಅಂತ್ಯದಲ್ಲಿಯೂ ಎಲೀಯನು ಪ್ರಾರ್ಥನೆ ಮಾಡಿದನೆಂದು ಸ್ಪಷ್ಟವಾಗಿ ಹೇಳಿರುವದಿಲ್ಲ. ಅವನು ಕರ್ಮೇಲ್ ಪರ್ವತದಲ್ಲಿ ಪ್ರಾರ್ಥಿಸಿದನೆಂದು ಹೇಳಿ ಇದೆ; ಅದಕ್ಕೆ ಮುಂಚೆ ಅವನು ಮಾಡಿದ ಪ್ರಾರ್ಥನೆಯಿಂದ ಬರ ಉಂಟಾಯಿತೆಂಬುವ ಮಾತಿಲ್ಲದಿದ್ದಾಗ್ಯೂ, ಬರಕ್ಕೆ ಮುಂಚೆ ಅವನು ಪ್ರಾರ್ಥಿಸಿದನೆಂದು ಈ ವಚನದಿಂದ ತಿಳಿಯುತ್ತದೆ.

5. ಭೂಮಿ ಎಂಬುವದು ಕಾನಾನ್ ದೇಶವನ್ನು ಕುರಿತದ್ದು. (೧ ಅರ. ೧೭. ೧.)

6. ಸತ್ಯಮಾರ್ಗದಿಂದ ತೊಲಗಿ ಮೋಸ ಹೋದವನನ್ನು ಸರಿಯಾದ ಮಾರ್ಗಕ್ಕೆ ತಿರುಗಿಸುವವನು ಚುರುಕಾಗಿ ಪ್ರಾರ್ಥನೆ ಮಾಡುವವನಾಗಿರ ಬೇಕು. ಮೂಲಪಿತೃವಾದ ಯಾಕೋಬನ ಹಾಗೆ ದೇವರ ಬಳಿಯಲ್ಲಿ ಹೋರಾಡುವವನೇ ಮಾರ್ಗ ತಪ್ಪಿದ ತನ್ನ ಸಹೋದರನ ಸಂಗಡ ಹೋರಾಡಿ ಜಯಿಸ ತಕ್ಕವನು.

7. ಪಾಪಮಾರ್ಗದಿಂದ ತಪ್ಪಿ, ಸತ್ಯಮಾರ್ಗಕ್ಕೆ ತಿರುಗಿ ಯೇಸು ಕ್ರಿಸ್ತನ ಶರಣು ಹೊಕ್ಕವನು ನರಕದಂಡನೆಯಾದ ನಿತ್ಯಮರಣಕ್ಕೆ ತಪ್ಪಿಸಿ ಕೊಳ್ಳುವನು. ಆತನ ಮಹಾ ಪ್ರೀತಿಯು ಪಾಪಗಳ ಸಮೂಹವನ್ನು ಮುಚ್ಚಿ ಬಿಡುವದರಿಂದ ಅವನು ಪುಣ್ಯವಂತನಾಗಿ ತೋರುವನು. ಇಷ್ಟು ಮೇಲು ಬರುವ ಹಾಗೆ ಪ್ರಾರ್ಥನೆಯಿಂದ ಹೋರಾಡುವವನು ಭಾಗ್ಯವಂತನು.